# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ಸಂಖ್ಯೆ: ಕವಿಪ್ರನಿನಿ/ಬಿ16/21723/2021–22

ದಿನಾಂಕ: 1 FEB 2022

## ಉದ್ಯೋಗ ಪ್ರಕಟಣೆ

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ (ಕವಿಪ್ರನಿನಿ), ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಬೆಸ್ಕಾಂ), ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ (ಸೆಸ್ಕ್), ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಹೆಸ್ಕಾಂ), ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಮೆಸ್ಕಾಂ) ಮತ್ತು ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಜೆಸ್ಕಾಂ) ಗಳ ಆಡಳಿತ ವ್ಯಾಪ್ತಿಯ ಕಚೇರಿಗಳಲ್ಲಿ ಖಾಲಿ ಇರುವ **ಮಿಕ್ಕುಳಿದ ಪದವೃಂದದ 399–ಸಹಾಯಕ ಇಂಜಿನಿಯರ್(ವಿ) (393 + 6 ಬ್ಯಾಕ್‌ಲಾಗ್ ಹುದ್ದೆಗಳು), 21–ಸಹಾಯಕ ಇಂಜಿನಿಯರ್(ಸಿವಿಲ್), 486–ಕಿರಿಯ ಇಂಜಿನಿಯರ್(ವಿ) (477 + 9 ಬ್ಯಾಕ್‌ಲಾಗ್ ಹುದ್ದೆಗಳು), 21–ಕಿರಿಯ ಇಂಜಿನಿಯರ್(ಸಿವಿಲ್)** ಮತ್ತು **357–ಕಿರಿಯ ಸಹಾಯಕ** ಹುದ್ದೆಗಳನ್ನು ಹಾಗೂ **ಅನುಚ್ಛೇಧ 371(ಜೆ)** ರ **ಅಡಿಯಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶ ವ್ಯಾಪ್ತಿಯಲ್ಲಿ ಗುರುತಿಸಲ್ಪಟ್ಟ ಸ್ಥಳಿಯ ಪದವೃಂದದ 106–ಸಹಾಯಕ ಇಂಜಿನಿಯರ್(ವಿ), 7–ಸಹಾಯಕ ಇಂಜಿನಿಯರ್(ಸಿವಿಲ್), 84–ಕಿರಿಯ ಇಂಜಿನಿಯರ್(ವಿ) (82 + 2 ಬ್ಯಾಕ್‌ಲಾಗ್ ಹುದ್ದೆಗಳು), 8–ಕಿರಿಯ ಇಂಜಿನಿಯರ್(ಸಿವಿಲ್) ಮತ್ತು 3–ಕಿರಿಯ ಸಹಾಯಕ** ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ನಿಗದಿತ ನಮೂನೆಯಲ್ಲಿ ಆನ್–ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಹುದ್ದೆಗಳ ಮೀಸಲಾತಿ ವಿವರ ಈ ಕೆಳಕಂಡಂತಿದೆ:–

## Non-Kalyana Karnataka (NKK) Posts (ಮಿಕ್ಕುಳಿದ ವೃಂದ)

**ಹುದ್ದೆ: ಸಹಾಯಕ ಇಂಜಿನಿಯರ್(ವಿದ್ಯುತ್):**

| ಸಮತಲ ಮೀಸಲಾತಿ | ಪ.ಜಾ. | ಪ.ವ. | ಸಾಮಾನ್ಯ | ಪ್ರ–1 | ಪ್ರ–2ಎ | ಪ್ರ–2ಬಿ | ಪ್ರ–3ಎ | ಪ್ರ–3ಬಿ | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | 12 | 2 | 42 | 2 | 12 | 2 | 2 | 3 | 77 |
| ಮಹಿಳಾ ಅಭ್ಯರ್ಥಿ | 20 | 5 | 65 | 6 | 20 | 6 | 6 | 7 | 135 |
| ಗ್ರಾಮೀಣ ಮೀಸಲಾತಿ | 15 | 3 | 50 | 5 | 15 | 5 | 4 | 5 | 102 |
| ಮಾಜಿ ಸೈನಿಕ | 6 | 1 | 19 | 1 | 5 | 1 | 1 | 1 | 35 |
| ಕನ್ನಡ ಮಾಧ್ಯಮ ಅಭ್ಯರ್ಥಿ | 3 | 0 | 10 | 1 | 3 | 1 | 1 | 1 | 20 |
| ವಿಕಲಚೇತನ ಅಭ್ಯರ್ಥಿ | 3 (*–2) (**–1) | 1 (*–1) | 8 (*–4) (**–4) | 1 (*–1) | 3 (*–2) (**–1) | 1 (*–1) | 1 (*–1) | 1 (*–1) | 19 |
| ತೃತೀಯ ಲಿಂಗದ ಅಭ್ಯರ್ಥಿ | 1 | 0 | 2 | 0 | 1 | 0 | 0 | 1 | 5 |
| ಒಟ್ಟು | **60** | **12** | **196** | **16** | **59** | **16** | **15** | **19** | **393** |

ವಿಕಲಚೇತನ ಅಭ್ಯರ್ಥಿ: * – **Locomotor or Cerebral Palsy (One Leg)**

** – **Hearing Impairment**

ಅರ್ಹ ವಿಕಲಚೇತನ ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ, ಸದರಿ ಹುದ್ದೆಗಳನ್ನು ಮುಂದಿನ ನೇಮಕಾತಿಗೆ ಕೊಂಡೊಯ್ಯಲಾಗುವುದು.

**ಬ್ಯಾಕ್‌ಲಾಗ್ ಹುದ್ದೆಗಳು**

| ಸಮತಲ ಮೀಸಲಾತಿ | ಪ.ಜಾ. | ಪ.ವ. | ಸಾಮಾನ್ಯ | ಪ್ರ–1 | ಪ್ರ–2ಎ | ಪ್ರ–2ಬಿ | ಪ್ರ–3ಎ | ಪ್ರ–3ಬಿ | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | 0 | 0 | 0 | 0 | 1 | 0 | 0 | 1 | 2 |
| ಮಹಿಳಾ ಅಭ್ಯರ್ಥಿ | 0 | 0 | 0 | 0 | 1 | 0 | 0 | 0 | 1 |
| ವಿಕಲಚೇತನ ಅಭ್ಯರ್ಥಿ | 2 (HH) | 0 | 0 | 1 (HH) | 0 | 0 | 0 | 0 | 3 |
| ಒಟ್ಟು | **2** | **0** | **0** | **1** | **2** | **0** | **0** | **1** | **6** |

ಸೂಚನೆ: ವಿಕಲಚೇತನ ಅಭ್ಯರ್ಥಿ ಕೋಟಾದಡಿಯಲ್ಲಿನ 3 ಹುದ್ದೆಗಳು (ಪರಿಶಿಷ್ಟ ಜಾತಿ:– 2 ಹುದ್ದೆಗಳು ಮತ್ತು ಪ್ರವರ್ಗ–1:– 1 ಹುದ್ದೆ) ಶ್ರವಣದೋಷ ಅಭ್ಯರ್ಥಿಗಳಿಗೆ ಮೀಸಲಿರಿಸಲಾಗಿದೆ. ಶ್ರವಣದೋಷ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ ಸದರಿ ಹುದ್ದೆಗಳಿಗೆ ಚಲನವಲನ ವೈಕಲ್ಯ – **One Leg** ಅಭ್ಯರ್ಥಿಗನ್ನು ಪರಿಗಣಿಸಲಾಗುವುದು. ಒಂದು ವೇಳೆ ಯಾವುದೇ ಅರ್ಹ ವಿಕಲಚೇತನ ಅಭ್ಯರ್ಥಿಗಳು ದೊರೆಯದಿದ್ದಲ್ಲಿ, ಸದರಿ ಹುದ್ದೆಗಳನ್ನು ಅರ್ಹ ಸಾಮಾನ್ಯ ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗುವುದು.

## ಹುದ್ದೆ: ಸಹಾಯಕ ಇಂಜಿನಿಯರ್(ಸಿವಿಲ್):

| ಸಮತಲ ಮೀಸಲಾತಿ | ಪ.ಜಾ. | ಪ.ವ. | ಸಾಮಾನ್ಯ | ಪ್ರ-1 | ಪ್ರ-2ಎ | ಪ್ರ-2ಬಿ | ಪ್ರ-3ಎ | ಪ್ರ-3ಬಿ | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | 1 | 1 | 2 | 1 | 1 | 1 | 1 | 1 | 9 |
| ಮಹಿಳಾ ಅಭ್ಯರ್ಥಿ | 1 | 0 | 3 | 0 | 1 | 0 | 0 | 0 | 5 |
| ಗ್ರಾಮೀಣ ಮೀಸಲಾತಿ | 1 | 0 | 3 | 0 | 1 | 0 | 0 | 0 | 5 |
| ಮಾಜಿ ಸೈನಿಕ | 0 | 0 | 1 | 0 | 0 | 0 | 0 | 0 | 1 |
| ವಿಕಲಚೇತನ ಅಭ್ಯರ್ಥಿ | 0 | 0 | 1 (*-1) | 0 | 0 | 0 | 0 | 0 | 1 |
| ಒಟ್ಟು | 3 | 1 | 10 | 1 | 3 | 1 | 1 | 1 | 21 |

ವಿಕಲಚೇತನ ಅಭ್ಯರ್ಥಿ: * – Locomotor or Cerebral Palsy (One Leg or One Arm)

ಅರ್ಹ ವಿಕಲಚೇತನ ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ, ಸದರಿ ಹುದ್ದೆಗಳನ್ನು ಮುಂದಿನ ನೇಮಕಾತಿಗೆ ಕೊಂಡೊಯ್ಯಲಾಗುವುದು.

## ಹುದ್ದೆ: ಕಿರಿಯ ಇಂಜಿನಿಯರ್(ವಿದ್ಯುತ್):

| ಸಮತಲ ಮೀಸಲಾತಿ | ಪ.ಜಾ. | ಪ.ವ. | ಸಾಮಾನ್ಯ | ಪ್ರ-1 | ಪ್ರ-2ಎ | ಪ್ರ-2ಬಿ | ಪ್ರ-3ಎ | ಪ್ರ-3ಬಿ | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | 12 | 2 | 37 | 2 | 12 | 2 | 2 | 3 | 72 |
| ಮಹಿಳಾ ಅಭ್ಯರ್ಥಿ | 24 | 6 | 79 | 7 | 24 | 7 | 7 | 8 | 162 |
| ಗ್ರಾಮೀಣ ಮೀಸಲಾತಿ | 18 | 4 | 60 | 5 | 18 | 5 | 5 | 6 | 121 |
| ಮಾಜಿ ಸೈನಿಕ | 7 | 1 | 23 | 1 | 7 | 1 | 1 | 2 | 43 |
| ಕನ್ನಡ ಮಾಧ್ಯಮ ಅಭ್ಯರ್ಥಿ | 3 | 1 | 12 | 1 | 3 | 1 | 1 | 1 | 23 |
| ಯೋಜನಾ ನಿರಾಶ್ರಿತ ಅಭ್ಯರ್ಥಿ | 3 | 0 | 12 | 1 | 3 | 1 | 1 | 1 | 22 |
| ವಿಕಲಚೇತನ ಅಭ್ಯರ್ಥಿ | 4 (*-2) (**-2) | 1 (*-1) | 12 (*-7) (**-5) | 1 (*-1) | 4 (*-2) (**-2) | 1 (*-1) | 1 (*-1) | 1 (*-1) | 25 |
| ತೃತೀಯ ಲಿಂಗದ ಅಭ್ಯರ್ಥಿ | 1 | 0 | 3 | 1 | 1 | 1 | 1 | 1 | 9 |
| ಒಟ್ಟು | 72 | 15 | 238 | 19 | 72 | 19 | 19 | 23 | 477 |

ವಿಕಲಚೇತನ ಅಭ್ಯರ್ಥಿ: * – Locomotor disability (One Leg)

**– Hearing Impairment

ಅರ್ಹ ವಿಕಲಚೇತನ ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ, ಸದರಿ ಹುದ್ದೆಗಳನ್ನು ಮುಂದಿನ ನೇಮಕಾತಿಗೆ ಕೊಂಡೊಯ್ಯಲಾಗುವುದು.

ಬ್ಯಾಕ್‌ಲಾಗ್ ಹುದ್ದೆಗಳು

| ಸಮತಲ ಮೀಸಲಾತಿ | ಪ.ಜಾ. | ಪ.ವ. | ಸಾಮಾನ್ಯ | ಪ್ರ-1 | ಪ್ರ-2ಎ | ಪ್ರ-2ಬಿ | ಪ್ರ-3ಎ | ಪ್ರ-3ಬಿ | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | 0 | 1 | 0 | 0 | 0 | 0 | 0 | 0 | 1 |
| ಮಹಿಳಾ ಅಭ್ಯರ್ಥಿ | 0 | 0 | 0 | 0 | 1 | 0 | 0 | 0 | 1 |
| ಗ್ರಾಮೀಣ ಮೀಸಲಾತಿ | 0 | 0 | 1 | 0 | 0 | 0 | 0 | 0 | 1 |
| ವಿಕಲಚೇತನ ಅಭ್ಯರ್ಥಿ | 2 (HH) | 0 | 2 (OL) | 1 (OL) | 0 | 1 (OL) | 0 | 0 | 6 |
| ಒಟ್ಟು | 2 | 1 | 3 | 1 | 1 | 1 | 0 | 0 | 9 |

ಸೂಚನೆ: ವಿಕಲಚೇತನ ಅಭ್ಯರ್ಥಿ ಕೋಟಾದಡಿಯಲ್ಲಿನ 6 ಹುದ್ದೆಗಳಲ್ಲಿ, ಪರಿಶಿಷ್ಟ ಜಾತಿ:– 2 ಹುದ್ದೆಗಳು ಶ್ರವಣದೋಷ ಅಭ್ಯರ್ಥಿಗಳಿಗೆ ಹಾಗೂ ಸಾಮಾನ್ಯ ವರ್ಗ:–2 ಹುದ್ದೆಗಳು, ಪ್ರವರ್ಗ–1:– 1 ಹುದ್ದೆ ಮತ್ತು ಪ್ರವರ್ಗ–2ಬಿ:– 1 ಹುದ್ದೆಗಳನ್ನು ಚಲನವಲನ ವೈಕಲ್ಯ – One Leg ಅಭ್ಯರ್ಥಿಗಳಿಗೆ ಮೀಸಲಿರಿಸಲಾಗಿದೆ. ಶ್ರವಣದೋಷ ಅಭ್ಯರ್ಥಿಗಳಿಗೆ ಮೀಸಲಿರಿಸಿರುವ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ, ಸದರಿ ಹುದ್ದೆಗಳಿಗೆ ಚಲನವಲನ ವೈಕಲ್ಯ – One Leg ಅಭ್ಯರ್ಥಿಗನ್ನು ಪರಿಗಣಿಸಲಾಗುವುದು ಹಾಗೂ ಚಲನವಲನ ವೈಕಲ್ಯ – One Leg ಅಭ್ಯರ್ಥಿಗಳಿಗೆ ಮೀಸಲಿರಿಸಿರುವ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ, ಸದರಿ ಹುದ್ದೆಗಳಿಗೆ ಶ್ರವಣದೋಷ ಅಭ್ಯರ್ಥಿಗನ್ನು ಪರಿಗಣಿಸಲಾಗುವುದು. ಒಂದು ವೇಳೆ ಯಾವುದೇ ಅರ್ಹ ವಿಕಲಚೇತನ ಅಭ್ಯರ್ಥಿಗಳು ದೊರೆಯದಿದ್ದಲ್ಲಿ, ಸದರಿ ಹುದ್ದೆಗಳನ್ನು ಅರ್ಹ ಸಾಮಾನ್ಯ ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗುವುದು.

## ಹುದ್ದೆ: ಕಿರಿಯ ಇಂಜಿನಿಯರ್(ಸಿವಿಲ್):

| ಸಮತಲ ಮೀಸಲಾತಿ | ಪ.ಜಾ. | ಪ.ವ. | ಸಾಮಾನ್ಯ | ಪ್ರ-1 | ಪ್ರ-2ಎ | ಪ್ರ-2ಬಿ | ಪ್ರ-3ಎ | ಪ್ರ-3ಬಿ | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | 1 | 1 | 2 | 1 | 1 | 1 | 1 | 1 | 9 |
| ಮಹಿಳಾ ಅಭ್ಯರ್ಥಿ | 1 | 0 | 3 | 0 | 1 | 0 | 0 | 0 | 5 |
| ಗ್ರಾಮೀಣ ಮೀಸಲಾತಿ | 1 | 0 | 3 | 0 | 1 | 0 | 0 | 0 | 5 |
| ಮಾಜಿ ಸೈನಿಕ | 0 | 0 | 1 | 0 | 0 | 0 | 0 | 0 | 1 |
| ವಿಕಲಚೇತನ ಅಭ್ಯರ್ಥಿ | 0 | 0 | 1 (*-1) | 0 | 0 | 0 | 0 | 0 | 1 |
| ಒಟ್ಟು | 3 | 1 | 10 | 1 | 3 | 1 | 1 | 1 | 21 |

ವಿಕಲಚೇತನ ಅಭ್ಯರ್ಥಿ: * – Locomotor disability (One Leg or One Arm)

ಅರ್ಹ ವಿಕಲಚೇತನ ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ, ಸದರಿ ಹುದ್ದೆಗಳನ್ನು ಮುಂದಿನ ನೇಮಕಾತಿಗೆ ಕೊಂಡೊಯ್ಯಲಾಗುವುದು.

## ಹುದ್ದೆ: ಕಿರಿಯ ಸಹಾಯಕ:

| ಸಮತಲ ಮೀಸಲಾತಿ | ಪ.ಜಾ. | ಪ.ವ. | ಸಾಮಾನ್ಯ | ಪ್ರ-1 | ಪ್ರ-2ಎ | ಪ್ರ-2ಬಿ | ಪ್ರ-3ಎ | ಪ್ರ-3ಬಿ | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | 8 | 2 | 28 | 2 | 8 | 2 | 2 | 2 | 54 |
| ಮಹಿಳಾ ಅಭ್ಯರ್ಥಿ | 18 | 4 | 59 | 6 | 18 | 5 | 5 | 6 | 121 |
| ಗ್ರಾಮೀಣ ಮೀಸಲಾತಿ | 14 | 3 | 45 | 4 | 14 | 4 | 4 | 5 | 93 |
| ಮಾಜಿ ಸೈನಿಕ | 5 | 1 | 17 | 1 | 5 | 1 | 1 | 1 | 32 |
| ಕನ್ನಡ ಮಾಧ್ಯಮ ಅಭ್ಯರ್ಥಿ | 3 | 0 | 9 | 1 | 3 | 1 | 1 | 1 | 19 |
| ಯೋಜನಾ ನಿರಾಶ್ರಿತ ಅಭ್ಯರ್ಥಿ | 2 | 0 | 9 | 0 | 2 | 0 | 0 | 1 | 14 |
| ವಿಕಲಚೇತನ ಅಭ್ಯರ್ಥಿ | 3<br>(*-1)<br>(**-1)<br>(***-1) | 1<br>(*-1) | 9<br>(*-4)<br>(**-3)<br>(***-2) | 1<br>(*-1) | 3<br>(*-1)<br>(**-1)<br>(***-1) | 1<br>(*-1) | 1<br>(*-1) | 1<br>(*-1) | 20 |
| ತೃತೀಯ ಲಿಂಗದ ಅಭ್ಯರ್ಥಿ | 1 | 0 | 2 | 0 | 1 | 0 | 0 | 0 | 4 |
| ಒಟ್ಟು | 54 | 11 | 178 | 15 | 54 | 14 | 14 | 17 | 357 |

ವಿಕಲಚೇತನ ಅಭ್ಯರ್ಥಿ: * - **Blind or Low Vision**

**- **Locomotor disability (One Leg or One Arm or Both Legs or One Arm & One Leg)**

***- **Hearing Impairment**

ಅರ್ಹ ವಿಕಲಚೇತನ ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ, ಸದರಿ ಹುದ್ದೆಗಳನ್ನು ಮುಂದಿನ ನೇಮಕಾತಿಗೆ ಕೊಂಡೊಯ್ಯಲಾಗುವುದು.

# Kalyana Karnataka (KK) Posts (ಅನುಚ್ಛೇಧ-371(ಜೆ) ಸ್ಥಳೀಯ ವೃಂದ)

## ಹುದ್ದೆ: ಸಹಾಯಕ ಇಂಜಿನಿಯರ್(ವಿದ್ಯುತ್):

| ಸಮತಲ ಮೀಸಲಾತಿ | ಪ.ಜಾ. | ಪ.ವ. | ಸಾಮಾನ್ಯ | ಪ್ರ-1 | ಪ್ರ-2ಎ | ಪ್ರ-2ಬಿ | ಪ್ರ-3ಎ | ಪ್ರ-3ಬಿ | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | 2 | 1 | 10 | 1 | 2 | 1 | 1 | 1 | 19 |
| ಮಹಿಳಾ ಅಭ್ಯರ್ಥಿ | 6 | 1 | 18 | 2 | 6 | 1 | 1 | 2 | 37 |
| ಗ್ರಾಮೀಣ ಮೀಸಲಾತಿ | 5 | 1 | 14 | 1 | 4 | 1 | 1 | 1 | 28 |
| ಮಾಜಿ ಸೈನಿಕ | 1 | 0 | 5 | 0 | 1 | 0 | 0 | 0 | 7 |
| ಕನ್ನಡ ಮಾಧ್ಯಮ ಅಭ್ಯರ್ಥಿ | 1 | 0 | 2 | 0 | 1 | 0 | 0 | 0 | 4 |
| ವಿಕಲಚೇತನ ಅಭ್ಯರ್ಥಿ | 1<br>(*-1) | 1<br>(*-1) | 3<br>(*-2)<br>(**-1) | 1<br>(*-1) | 1<br>(*-1) | 1<br>(*-01) | 1<br>(*-01) | 1<br>(*-01) | 10 |
| ತೃತೀಯ ಲಿಂಗದ ಅಭ್ಯರ್ಥಿ | 0 | 0 | 1 | 0 | 0 | 0 | 0 | 0 | 1 |
| ಒಟ್ಟು | 16 | 4 | 53 | 5 | 15 | 4 | 4 | 5 | 106 |

ವಿಕಲಚೇತನ ಅಭ್ಯರ್ಥಿ: * - **Locomotor or Cerebral Palsy (One Leg)**

**- **Hearing Impairment**

ಅರ್ಹ ವಿಕಲಚೇತನ ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ, ಸದರಿ ಹುದ್ದೆಗಳನ್ನು ಮುಂದಿನ ನೇಮಕಾತಿಗೆ ಕೊಂಡೊಯ್ಯಲಾಗುವುದು.

## ಹುದ್ದೆ: ಸಹಾಯಕ ಇಂಜಿನಿಯರ್(ಸಿವಿಲ್):

| ಸಮತಲ ಮೀಸಲಾತಿ | ಪ.ಜಾ. | ಪ.ವ. | ಸಾಮಾನ್ಯ | ಪ್ರ-1 | ಪ್ರ-2ಎ | ಪ್ರ-2ಬಿ | ಪ್ರ-3ಎ | ಪ್ರ-3ಬಿ | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | 1 | 1 | 1 | 1 | 1 | 0 | 0 | 0 | 5 |
| ಮಹಿಳಾ ಅಭ್ಯರ್ಥಿ | 0 | 0 | 1 | 0 | 0 | 0 | 0 | 0 | 1 |
| ಗ್ರಾಮೀಣ ಮೀಸಲಾತಿ | 0 | 0 | 1 | 0 | 0 | 0 | 0 | 0 | 1 |
| ಒಟ್ಟು | 1 | 1 | 3 | 1 | 1 | 0 | 0 | 0 | 7 |

## ಹುದ್ದೆ: ಕಿರಿಯ ಇಂಜಿನಿಯರ್(ವಿದ್ಯುತ್):

| ಸಮತಲ ಮೀಸಲಾತಿ | ಪ.ಜಾ. | ಪ.ವ. | ಸಾಮಾನ್ಯ | ಪ್ರ-1 | ಪ್ರ-2ಎ | ಪ್ರ-2ಬಿ | ಪ್ರ-3ಎ | ಪ್ರ-3ಬಿ | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | 2 | 1 | 7 | 1 | 2 | 1 | 1 | 1 | 16 |
| ಮಹಿಳಾ ಅಭ್ಯರ್ಥಿ | 5 | 1 | 13 | 1 | 5 | 1 | 1 | 1 | 28 |
| ಗ್ರಾಮೀಣ ಮೀಸಲಾತಿ | 4 | 1 | 10 | 1 | 3 | 1 | 1 | 1 | 22 |
| ಮಾಜಿ ಸೈನಿಕ | 1 | 0 | 4 | 0 | 1 | 0 | 0 | 0 | 6 |

| | | | | | | | | | |
|---|---|---|---|---|---|---|---|---|---|
| ಕನ್ನಡ ಮಾಧ್ಯಮ ಅಭ್ಯರ್ಥಿ | 0 | 0 | 2 | 0 | 0 | 0 | 0 | 0 | 2 |
| ಯೋಜನಾ ನಿರಾಶ್ರಿತ ಅಭ್ಯರ್ಥಿ | 0 | 0 | 2 | 0 | 0 | 0 | 0 | 0 | 2 |
| ವಿಕಲಚೇತನ ಅಭ್ಯರ್ಥಿ | 1 (*-1) | 0 | 2 (*-1) (**-1) | 1 (*-1) | 1 (*-1) | 0 | 0 | 0 | 5 |
| ತೃತೀಯ ಲಿಂಗದ ಅಭ್ಯರ್ಥಿ | 0 | 0 | 1 | 0 | 0 | 0 | 0 | 0 | 1 |
| ಒಟ್ಟು | **13** | **3** | **41** | **4** | **12** | **3** | **3** | **3** | **82** |

ವಿಕಲಚೇತನ ಅಭ್ಯರ್ಥಿ: * – **Locomotor disability (One Leg)**

**– **Hearing Impairment**

ಅರ್ಹ ವಿಕಲಚೇತನ ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ, ಸದರಿ ಹುದ್ದೆಗಳನ್ನು ಮುಂದಿನ ನೇಮಕಾತಿಗೆ ಕೊಂಡೊಯ್ಯಲಾಗುವುದು.

ಬ್ಯಾಕ್‌ಲಾಗ್ ಹುದ್ದೆಗಳು

| ಸಮತಲ ಮೀಸಲಾತಿ | ಪ.ಜಾ. | ಪ.ವ. | ಸಾಮಾನ್ಯ | ಪ್ರ-1 | ಪ್ರ-2ಎ | ಪ್ರ-2ಬಿ | ಪ್ರ-3ಎ | ಪ್ರ-3ಬಿ | ಒಟ್ಟು |
|---|---|---|---|---|---|---|---|---|---|
| ಮಹಿಳಾ ಅಭ್ಯರ್ಥಿ | 0 | 0 | 0 | 0 | 0 | 1 | 0 | 0 | 1 |
| ವಿಕಲಚೇತನ ಅಭ್ಯರ್ಥಿ | 0 | 0 | 0 | 0 | 1 (LOCO) | 0 | 0 | 0 | 1 |
| ಒಟ್ಟು | **0** | **0** | **0** | **0** | **1** | **1** | **0** | **0** | **2** |

ಸೂಚನೆ: ಪ್ರವರ್ಗ-ಎ ವಿಕಲಚೇತನ ಅಭ್ಯರ್ಥಿ ಕೋಟಾದಡಿಯಲ್ಲಿನ 1 ಹುದ್ದೆಯನ್ನು ಚಲನವಲನ ವೈಕಲ್ಯ – **One Leg** ಅಭ್ಯರ್ಥಿಗಳಿಗೆ ಮೀಸಲಿರಿಸಲಾಗಿದೆ. ಚಲನವಲನ ವೈಕಲ್ಯ – **One Leg** ಅಭ್ಯರ್ಥಿಗಳಿಗೆ ಮೀಸಲಿರಿಸಿರುವ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ, ಸದರಿ ಹುದ್ದೆಗಳಿಗೆ ಶ್ರವಣದೋಷ ಅಭ್ಯರ್ಥಿಗಳನ್ನು (HH) ಪರಿಗಣಿಸಲಾಗುವುದು. ಒಂದು ವೇಳೆ ಯಾವುದೇ ಅರ್ಹ ವಿಕಲಚೇತನ ಅಭ್ಯರ್ಥಿಗಳು ದೊರೆಯದಿದ್ದಲ್ಲಿ, ಸದರಿ ಹುದ್ದೆಗಳನ್ನು ಅರ್ಹ ಸಾಮಾನ್ಯ ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗುವುದು.

## ಹುದ್ದೆ: ಕಿರಿಯ ಇಂಜಿನಿಯರ್(ಸಿವಿಲ್):

| ಸಮತಲ ಮೀಸಲಾತಿ | ಪ.ಜಾ. | ಪ.ವ. | ಸಾಮಾನ್ಯ | ಪ್ರ-1 | ಪ್ರ-2ಎ | ಪ್ರ-2ಬಿ | ಪ್ರ-3ಎ | ಪ್ರ-3ಬಿ | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | 1 | 1 | 1 | 1 | 1 | 0 | 0 | 0 | 5 |
| ಮಹಿಳಾ ಅಭ್ಯರ್ಥಿ | 0 | 0 | 1 | 0 | 0 | 0 | 0 | 0 | 1 |
| ಗ್ರಾಮೀಣ ಮೀಸಲಾತಿ | 0 | 0 | 1 | 0 | 0 | 0 | 0 | 0 | 1 |
| ವಿಕಲಚೇತನ ಅಭ್ಯರ್ಥಿ | 0 | 0 | 1 (*-1) | 0 | 0 | 0 | 0 | 0 | 1 |
| ಒಟ್ಟು | **1** | **1** | **4** | **1** | **1** | **0** | **0** | **0** | **8** |

ವಿಕಲಚೇತನ ಅಭ್ಯರ್ಥಿ: * – **Locomotor disability (One Leg or One Arm)**

ಅರ್ಹ ವಿಕಲಚೇತನ ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ, ಸದರಿ ಹುದ್ದೆಗಳನ್ನು ಮುಂದಿನ ನೇಮಕಾತಿಗೆ ಕೊಂಡೊಯ್ಯಲಾಗುವುದು.

## ಹುದ್ದೆ: ಕಿರಿಯ ಸಹಾಯಕ:

| ಸಮತಲ ಮೀಸಲಾತಿ | ಪ.ಜಾ. | ಪ.ವ. | ಸಾಮಾನ್ಯ | ಪ್ರ-1 | ಪ್ರ-2ಎ | ಪ್ರ-2ಬಿ | ಪ್ರ-3ಎ | ಪ್ರ-3ಬಿ | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | 1 | 1 | 1 | 0 | 0 | 0 | 0 | 0 | 3 |
| ಒಟ್ಟು | **1** | **1** | **1** | **0** | **0** | **0** | **0** | **0** | **3** |

**ಸೂಚನೆ:**

i) ಆಯ್ಕೆ ಹೊಂದಿದ ಅಭ್ಯರ್ಥಿಗಳನ್ನು ರಾಜ್ಯಾದ್ಯಂತ ಕವಿಪ್ರನಿನಿ ಅಥವಾ ಎಸ್ಕಾಂಗಳ ಅವಶ್ಯಕತೆಗನುಗುಣವಾಗಿ ಖಾಲಿ ಹುದ್ದೆಗೆ ತೈನಾತಿಸುವ ಹಕ್ಕನ್ನು ಕವಿಪ್ರನಿನಿಯು ಹೊಂದಿರುತ್ತದೆ.

ii) ಅರ್ಹ ಅಭ್ಯರ್ಥಿಗಳ ಕೊರತೆಯಿಂದ ಭರ್ತಿಯಾಗದೆ ಉಳಿಯುವ ಹುದ್ದೆಗಳನ್ನು ಸರ್ಕಾರದಲ್ಲಿ ಚಾಲ್ತಿಯಲ್ಲಿರುವ ಮೀಸಲಾತಿ ನಿಯಮಗಳನುಸಾರ ಬ್ಯಾಕ್‌ಲಾಗ್ ಎಂದು ಪರಿಗಣಿಸಲಾಗುವುದು.

iii) ಅನುಚ್ಛೇದ-371(ಜೆ) ಅಡಿಯಲ್ಲಿ ಆಯ್ಕೆಗೊಳ್ಳುವ ಅಭ್ಯರ್ಥಿಗಳನ್ನು ಕಲ್ಯಾಣ ಕರ್ನಾಟಕ ಪ್ರದೇಶ ವ್ಯಾಪ್ತಿಯ ಹುದ್ದೆಗಳಿಗೆ ಮಾತ್ರ ಭರ್ತಿ ಮಾಡಲಾಗುವುದು.

iv) ವಿಕಲಚೇತನ ಅಭ್ಯರ್ಥಿಗಳ ಭರ್ತಿಯನ್ನು ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 235 ಸೇನೆನಿ 2012, ದಿನಾಂಕ: 22.11.2016 ರಲ್ಲಿ ತಿಳಿಸಿರುವ ಮಾರ್ಗಸೂಚಿಯಂತೆ ಮಾಡಲಾಗುವುದು.

## ಸ್ಥಳೀಯ ವೃಂದ ಮತ್ತು ಮಿಕ್ಕುಳಿದ ವೃಂದ ಎರಡು ವೃಂದಗಳಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳಿಗೆ ವಿಶೇಷ ಸೂಚನೆ:

i) ಕಲ್ಯಾಣ ಕರ್ನಾಟಕ (ಹೈದರಾಬಾದ್-ಕರ್ನಾಟಕ) ಪ್ರದೇಶದ ಸ್ಥಳೀಯ ವ್ಯಕ್ತಿಗಳು ಸ್ಥಳೀಯ ವೃಂದದ ಹುದ್ದೆ ಹಾಗೂ ಮಿಕ್ಕುಳಿದ ವೃಂದದ ಹುದ್ದೆ ಈ ಎರಡೂ ವೃಂದದ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಅರ್ಹರಿರುತ್ತಾರೆ.

ii) ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದ ಹಾಗೂ ಮಿಕ್ಕುಳಿದ ವೃಂದಗಳೆರಡಕ್ಕೂ ಅರ್ಜಿಯನ್ನು ಸಲ್ಲಿಸಲು ಬಯಸುವ ಅಭ್ಯರ್ಥಿಗಳು, ಆನ್-ಲೈನ್ ಅರ್ಜಿಯಲ್ಲಿ ಈ ಅಂಶವನ್ನು ಸ್ಪಷ್ಟವಾಗಿ ತಿಳಿಸುವುದು. ಅಲ್ಲದೆ ಒಂದೇ ಹುದ್ದೆಯ

ಆಯ್ಕೆಗೆ ಸ್ಥಳೀಯ ವೃಂದ ಹಾಗೂ ಮಿಕ್ಕುಳಿದ ವೃಂದ, ಎರಡೂ ವೃಂದಗಳಲ್ಲಿ ಅರ್ಹತೆ ಹೊಂದಿದಲ್ಲಿ, ಯಾವ ವೃಂದಕ್ಕೆ ಆಯ್ಕೆಯಾಗಲು ಬಯಸುತ್ತಾರೆ ಎಂಬುದರ ಬಗ್ಗೆ ಅಭ್ಯರ್ಥಿಗಳು ಆದ್ಯತೆಯನ್ನು ಆನ್-ಲೈನ್ ಅರ್ಜಿಯಲ್ಲಿ ತಪ್ಪದೇ ತಿಳಿಸುವುದು.

iii) ಒಂದು ವೇಳೆ ಕಲ್ಯಾಣ ಕರ್ನಾಟಕ ಪ್ರದೇಶದ ಸ್ಥಳೀಯ ಅಭ್ಯರ್ಥಿಯು ಪ್ರಸ್ತುತ ನೇಮಕಾತಿಗೆ ಸಂಬಂಧಿಸಿದಂತೆ ಮಿಕ್ಕುಳಿದ ವೃಂದದ ಹುದ್ದೆಯನ್ನು ಆಯ್ಕೆ ಮಾಡಿಕೊಂಡು ನೇಮಕಾತಿ ಹೊಂದಿದಲ್ಲಿ, ಅಂತಹ ಅಭ್ಯರ್ಥಿಯು ಜಾರಿಯಲ್ಲಿರುವ ನಿಯಮದಂತೆ ತನ್ನ ಸೇವಾ ಅವಧಿಯಲ್ಲಿ ಅನುಚ್ಛೇದ-371(ಜೆ) ಮೀಸಲಾತಿ ಸೌಲಭ್ಯಗಳನ್ನು ಪಡೆಯಲು ಅವಕಾಶವಿರುವುದಿಲ್ಲ.

## 1. ವೇತನ ಶ್ರೇಣಿಗಳು:

| ಕ್ರ. ಸಂ. | ಹುದ್ದೆಯ ಹೆಸರು | ವೇತನ ಶ್ರೇಣಿ |
|---|---|---|
| i) | ಸಹಾಯಕ ಇಂಜಿನಿಯರ್(ವಿ) ಹಾಗೂ ಸಹಾಯಕ ಇಂಜಿನಿಯರ್(ಸಿವಿಲ್) | ₹41130-1140-42270-1270-46080-1390-51640-1560-56320-1700-63120-1900-68820-2050-72920 |
| ii) | ಕಿರಿಯ ಇಂಜಿನಿಯರ್(ವಿ) ಹಾಗೂ ಕಿರಿಯ ಇಂಜಿನಿಯರ್(ಸಿವಿಲ್) | ₹26270-810-31130-940-37710-1140-42270-1270-46080-1390-51640-1560-56320-1700-63120-1900-65020 |
| iii) | ಕಿರಿಯ ಸಹಾಯಕ | ₹20220-540-22920-670-26270-810-31130-940-37710-1140-42270-1270-46080-1390-51640 |

## 2. ನೌಕರಿ ಭರ್ತಿ ಮತ್ತು ಬಡತಿ ನಿಯಮಗಳನ್ವಯ ನಿಗದಿತ ಶೈಕ್ಷಣಿಕ ವಿದ್ಯಾರ್ಹತೆ

| ಕ್ರ. ಸಂ. | ಹುದ್ದೆಯ ಹೆಸರು | ವಿದ್ಯಾರ್ಹತೆ |
|---|---|---|
| i) | ಸಹಾಯಕ ಇಂಜಿನಿಯರ್(ವಿ) | ಮನ್ನಣೆ ಪಡೆದ ಯಾವುದೇ ವಿಶ್ವವಿದ್ಯಾಲಯ/ಸಂಸ್ಥೆಯ (ಎ.ಐ.ಸಿ.ಟಿ.ಇ ಇಂದ ಮಾನ್ಯತೆ ಪಡೆದಿರುವ) ಎಲೆಕ್ಟ್ರಿಕಲ್ ಅಥವಾ ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್‌ನಲ್ಲಿ ಬಿ.ಇ./ಬಿ.ಟೆಕ್ ಪದವಿ ಹೊಂದಿರತಕ್ಕದ್ದು ಅಥವಾ ಎ.ಎಂ.ಐ.ಇ. (ಭಾಗ-ಎ ಮತ್ತು ಬಿ ಎಲೆಕ್ಟ್ರಿಕಲ್) ಪರೀಕ್ಷೆಯಲ್ಲಿ ಉತ್ತೀರ್ಣತೆ. |
| ii) | ಸಹಾಯಕ ಇಂಜಿನಿಯರ್(ಸಿವಿಲ್) | ಮನ್ನಣೆ ಪಡೆದ ಯಾವುದೇ ವಿಶ್ವವಿದ್ಯಾಲಯ/ಸಂಸ್ಥೆಯ (ಎ.ಐ.ಸಿ.ಟಿ.ಇ ಇಂದ ಮಾನ್ಯತೆ ಪಡೆದಿರುವ) ಸಿವಿಲ್ ಇಂಜಿನಿಯರಿಂಗ್‌ನಲ್ಲಿ ಬಿ.ಇ./ ಬಿ.ಟೆಕ್ ಪದವಿ ಹೊಂದಿರತಕ್ಕದ್ದು ಅಥವಾ ಎ.ಎಂ.ಐ.ಇ. (ಭಾಗ-ಎ ಮತ್ತು ಬಿ ಸಿವಿಲ್) ಪರೀಕ್ಷೆಯಲ್ಲಿ ಉತ್ತೀರ್ಣತೆ. |
| iii) | ಕಿರಿಯ ಇಂಜಿನಿಯರ್(ವಿ) | ಕರ್ನಾಟಕ ರಾಜ್ಯದ ಪಾಲಿಟೆಕ್ನಿಕ್‌ನಿಂದ ವ್ಯಾಸಂಗ ಮಾಡಿ ಕರ್ನಾಟಕ ತಾಂತ್ರಿಕ ಶಿಕ್ಷಣ ಮಂಡಳಿಯಿಂದ ಎಲೆಕ್ಟ್ರಿಕಲ್ ಅಥವಾ ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್‌ನಲ್ಲಿ ಡಿಪ್ಲೊಮಾ ವಿದ್ಯಾರ್ಹತೆ ಹೊಂದಿರತಕ್ಕದ್ದು. |
| iv) | ಕಿರಿಯ ಇಂಜಿನಿಯರ್(ಸಿವಿಲ್) | ಕರ್ನಾಟಕ ರಾಜ್ಯದ ಪಾಲಿಟೆಕ್ನಿಕ್‌ನಿಂದ ವ್ಯಾಸಂಗ ಮಾಡಿ ಕರ್ನಾಟಕ ತಾಂತ್ರಿಕ ಶಿಕ್ಷಣ ಮಂಡಳಿಯಿಂದ ಸಿವಿಲ್ ಇಂಜಿನಿಯರಿಂಗ್‌ನಲ್ಲಿ ಡಿಪ್ಲೊಮಾ ವಿದ್ಯಾರ್ಹತೆ ಹೊಂದಿರತಕ್ಕದ್ದು. |
| v) | ಕಿರಿಯ ಸಹಾಯಕ | ಪದವಿ ಪೂರ್ವ ಶಿಕ್ಷಣ ಇಲಾಖೆಯಿಂದ ನಡೆಸಲಾಗುವ ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ ಉತ್ತೀರ್ಣತೆ ಅಥವಾ ಸಿ.ಬಿ.ಎಸ್.ಇ. ಮತ್ತು ಐ.ಎಸ್.ಸಿ. ಪರೀಕ್ಷಾ ಮಂಡಳಿಗಳಿಂದ ನಡೆಸಲಾಗುವ 12ನೇ ತರಗತಿ ಪರೀಕ್ಷೆಯಲ್ಲಿ ಉತ್ತೀರ್ಣತೆ. |

**ವಿಶೇಷ ಸೂಚನೆ:-**

i) ಮೇಲೆ ತಿಳಿಸಿದ ಹುದ್ದೆಗಳಿಗೆ ನಿರ್ದಿಷ್ಟಪಡಿಸಿರುವ ನಿಗದಿತ ವಿದ್ಯಾರ್ಹತೆಗಳನ್ನು ಹೊರತುಪಡಿಸಿ ಇತರೆ ವಿಷಯ/ವಿಭಾಗಗಳ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳ ಅರ್ಜಿಗಳನ್ನು ನೇಮಕಾತಿಗೆ ಪರಿಗಣಿಸಲಾಗುವುದಿಲ್ಲ.

ii) **ಮೇಲೆ ತಿಳಿಸಿದ ನಿರ್ದಿಷ್ಟ ವಿದ್ಯಾರ್ಹತೆಗಳನ್ನು ಹೊರತುಪಡಿಸಿ ಇತರೆ ಯಾವುದೇ ತತ್ಸಮಾನ ವಿದ್ಯಾರ್ಹತೆಗಳನ್ನು** ನೇಮಕಾತಿಗೆ ಪರಿಗಣಿಸಲಾಗುವುದಿಲ್ಲ.

iii) ಮುಕ್ತ ವಿಶ್ವವಿದ್ಯಾಲಯಗಳು/ಮುಕ್ತ ಶಾಲೆಗಳಿಂದ ನಡೆಸುವ 10+2 ಪರೀಕ್ಷೆಯನ್ನು ಹಾಗೂ ಬ್ರಿಡ್ಜ್ ಕೋರ್ಸ್ ವಿದ್ಯಾರ್ಹತೆಯನ್ನು ಕಿರಿಯ ಸಹಾಯಕ ಹುದ್ದೆಯ ನೇಮಕಾತಿಗೆ ಪರಿಗಣಿಸಲಾಗುವುದಿಲ್ಲ.

iv) ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ (AICTE) ನವದೆಹಲಿ ಇವರ ಸಾರ್ವಜನಿಕ ಪ್ರಕಟಣೆ ಸಂಖ್ಯೆ: UB/02/(02)/2010 ರ ಪ್ರಕಾರ ಇಂಜಿನಿಯರಿಂಗ್/ಟೆಕ್ನಾಲಜಿ ಕ್ಷೇತ್ರಗಳಲ್ಲಿ ದೂರ ಶಿಕ್ಷಣ ಮಾಧ್ಯಮದ ಮೂಲಕ ಪಡೆದ ಡಿಪ್ಲೊಮಾ, ಪದವಿ ಮತ್ತು ಸ್ನಾತಕೋತ್ತರ ವಿದ್ಯಾರ್ಹತೆಗಳಿಗೆ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್, ನವದೆಹಲಿ ಇವರ ಮಾನ್ಯತೆ ಇರುವುದಿಲ್ಲವೆಂದು ತಿಳಿಸಿರುವುದರಿಂದ, ಇಂತಹ ವಿಶ್ವವಿದ್ಯಾಲಯ/ವಿದ್ಯಾಸಂಸ್ಥೆಗಳಿಂದ ಪಡೆದ ಡಿಪ್ಲೊಮಾ/ಇಂಜಿನಿಯರಿಂಗ್ ಪದವಿಗಳನ್ನು ನೇಮಕಾತಿಗೆ ಪರಿಗಣಿಸಲಾಗುವುದಿಲ್ಲ.

v) ದೂರ ಶಿಕ್ಷಣ ಮತ್ತು ಮುಕ್ತ ವಿಶ್ವವಿದ್ಯಾಲಯಗಳಿಂದ ಪಡೆದ ಡಿಪ್ಲೊಮಾ ಹಾಗೂ ಇಂಜಿನಿಯರಿಂಗ್ ಪದವಿಗಳನ್ನು ನೇಮಕಾತಿಗೆ ಪರಿಗಣಿಸಲಾಗುವುದಿಲ್ಲ.

vi) ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಅಭ್ಯರ್ಥಿಗಳು ಈ ಮೇಲೆ ನಿಗದಿಪಡಿಸಿರುವ ಶೈಕ್ಷಣಿಕ ವಿದ್ಯಾರ್ಹತೆಯಲ್ಲಿ ಉತ್ತೀರ್ಣಗೊಂಡಿರತಕ್ಕದ್ದು ಹಾಗೂ ಪದವಿ/ಡಿಪ್ಲೊಮಾ ಪ್ರಮಾಣ ಪತ್ರವನ್ನು ಹೊಂದಿರತಕ್ಕದ್ದು.

vii) ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಈ ಮೇಲಿನ ನಿಗದಿತ ಶೈಕ್ಷಣಿಕ ವಿದ್ಯಾರ್ಹತೆ ಪರೀಕ್ಷೆ ಬರೆದು ಫಲಿತಾಂಶಕ್ಕಾಗಿ ಕಾಯುತ್ತಿರುವ ಅಭ್ಯರ್ಥಿಗಳು, ಅರ್ಜಿ ಸಲ್ಲಿಸಲು ಅರ್ಹರಾಗಿರುವುದಿಲ್ಲ.

viii) ಈ ಅಧಿಸೂಚನೆಯನ್ವಯ ನೇಮಕಾತಿಗೆ ಪರಿಗಣಿಸಬೇಕಾಗುವ ವಿದ್ಯಾರ್ಹತೆ ಬಗ್ಗೆ ಅಂತಿಮ ನಿರ್ಧಾರ ಕೈಗೊಳ್ಳುವ ಹಕ್ಕನ್ನು ಕವಿಪ್ರನಿನಿಯು ಮಾತ್ರ ಹೊಂದಿರುತ್ತದೆ ಹಾಗೂ ಅಭ್ಯರ್ಥಿಗಳು ಅದಕ್ಕೆ ಬದ್ಧರಾಗಿರತಕ್ಕದ್ದು.

**3. ಅರ್ಹತೆ:**

ನಿಗದಿಪಡಿಸಿರುವ ಶೈಕ್ಷಣಿಕ ಪರೀಕ್ಷೆಗಳಲ್ಲಿ ಈ ಕೆಳಗೆ ತಿಳಿಸಿರುವಷ್ಟು ಕನಿಷ್ಠ ಶೇಕಡಾವಾರು ಅಂಕಗಳನ್ನು ಪಡೆದಿರುವಂತಹ ಅಭ್ಯರ್ಥಿಗಳು ಮಾತ್ರ ಮೇಲೆ ತಿಳಿಸಿರುವ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ:

| ಕ್ರ.ಸಂ. | ವರ್ಗ | ಶೇಕಡಾವಾರು | ಷರಾ |
|---|---|---|---|
| i) | ಸಾಮಾನ್ಯ ವರ್ಗದ ಅಭ್ಯರ್ಥಿಗಳು | ಶೇ.60 | i) ಪರೀಕ್ಷೆಯು ವಾರ್ಷಿಕವಾಗಿದ್ದಲ್ಲಿ ಎಲ್ಲಾ ವರ್ಷಗಳ ಪರೀಕ್ಷೆಯಲ್ಲಿ ಗಳಿಸಿರುವ ಅಂಕಗಳನ್ನು ಒಟ್ಟುಗೂಡಿಸಿ ನಂತರ ಲೆಕ್ಕಹಾಕಲಾದ ಶೇಕಡಾವಾರು ಸರಾಸರಿ.<br>ii) ಪರೀಕ್ಷೆಯು ಸೆಮಿಸ್ಟರ್ ಪದ್ಧತಿಯಾಗಿದ್ದಲ್ಲಿ ಎಲ್ಲಾ ಸೆಮಿಸ್ಟರ್‌ಗಳ ಪರೀಕ್ಷೆಯಲ್ಲಿ ಗಳಿಸಿರುವ ಅಂಕಗಳನ್ನು ಒಟ್ಟುಗೂಡಿಸಿ ನಂತರ ಲೆಕ್ಕಹಾಕಲಾದ ಶೇಕಡಾವಾರು ಸರಾಸರಿ. |
| ii) | ಪ್ರವರ್ಗ-1, 2(ಎ), 2(ಬಿ), 3(ಎ) ಮತ್ತು 3(ಬಿ) ಗೆ ಸೇರಿದ ಅಭ್ಯರ್ಥಿಗಳು | ಶೇ.50 | |
| iii) | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಅಭ್ಯರ್ಥಿಗಳು | ತೇರ್ಗಡೆ ಅಂಕಗಳು | |

**ಸೂಚನೆ:** ಎಲ್ಲೆಲ್ಲಿ, ಸಿ.ಜಿ.ಪಿ.ಎ/ಒ.ಜಿ.ಪಿ.ಎ/ಸಿ.ಪಿ.ಐ.(CGPA/OGPA/CPI) ಅಥವಾ ಸ್ಕೋರ್ ಗ್ರೇಡಿಂಗ್ ಅನ್ನು ವಿಶ್ವವಿದ್ಯಾಲಯ/ವಿದ್ಯಾಸಂಸ್ಥೆಗಳಿಂದ ನೀಡಲಾಗಿರುತ್ತದೆಯೋ, ಅಂತಹ ವಿಶ್ವವಿದ್ಯಾಲಯ/ ವಿದ್ಯಾಸಂಸ್ಥೆಗಳು ಅಳವಡಿಸಿಕೊಂಡ ಮಾನದಂಡಗಳ ಪ್ರಕಾರ ಸಮಾನ ಶೇಕಡಾವಾರು ಅಂಕಗಳನ್ನು ಸೂಚಿಸಬೇಕು. ಅಭ್ಯರ್ಥಿಗಳು ದಾಖಲಾತಿ ಪರಿಶೀಲನಾ ಸಮಯದಲ್ಲಿ ಸಂಬಂಧಪಟ್ಟ ವಿಶ್ವವಿದ್ಯಾಲಯ/ವಿದ್ಯಾಸಂಸ್ಥೆಗಳಿಂದ ನೀಡಲಾಗುವ ಪರಿವರ್ತನಾ ಕೋಷ್ಟಕ/ಪ್ರಮಾಣ ಪತ್ರಗಳನ್ನು ಶೇಕಡಾವಾರು ಅಂಕಗಳನ್ನು ನಿರ್ಧರಿಸಲು ಕಡ್ಡಾಯವಾಗಿ ತರತಕ್ಕದ್ದು. ಇಲ್ಲದಿದ್ದಲ್ಲಿ ಅಭ್ಯರ್ಥಿತನವನ್ನು ರದ್ದುಗೊಳಿಸಲಾಗುವುದು.

**4. ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ದಿನಾಂಕ:**

| ಪ್ರಾರಂಭಿಕ ದಿನಾಂಕ | ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | ಶುಲ್ಕ ಪಾವತಿಸಲು ಕೊನೆಯ ದಿನಾಂಕ |
|---|---|---|
| 07.02.2022 | 07.03.2022 | 09.03.2022 |

**5. ಅರ್ಜಿ ಶುಲ್ಕ (ಹಿಂದಿರುಗಿಸಲಾಗುವುದಿಲ್ಲ) (Non-Refundable):**

| | |
|---|---|
| ಸಾಮಾನ್ಯ ವರ್ಗದ ಅಭ್ಯರ್ಥಿಗಳು | ₹600/- (ಸರಕು ಮತ್ತು ಸೇವಾ ತೆರಿಗೆ ಹಾಗೂ ಅಂಚೆ ಸೇವಾ ಶುಲ್ಕ ಒಳಗೊಂಡಂತೆ). |
| ಪ್ರವರ್ಗ-1, 2(ಎ), 2(ಬಿ), 3(ಎ) ಮತ್ತು 3(ಬಿ) ಗೆ ಸೇರಿದ ಅಭ್ಯರ್ಥಿಗಳು | ₹600/- (ಸರಕು ಮತ್ತು ಸೇವಾ ತೆರಿಗೆ ಹಾಗೂ ಅಂಚೆ ಸೇವಾ ಶುಲ್ಕ ಒಳಗೊಂಡಂತೆ). |
| ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಅಭ್ಯರ್ಥಿಗಳು | ₹350/- (ಸರಕು ಮತ್ತು ಸೇವಾ ತೆರಿಗೆ ಹಾಗೂ ಅಂಚೆ ಸೇವಾ ಶುಲ್ಕ ಒಳಗೊಂಡಂತೆ). |
| ವಿಕಲಚೇತನ ಅಭ್ಯರ್ಥಿಗಳು | ಶುಲ್ಕ ಪಾವತಿಯಿಂದ ವಿನಾಯಿತಿ ನೀಡಲಾಗಿದೆ. |

**6. ವಯೋಮಿತಿ:**

ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಅಭ್ಯರ್ಥಿಯು, ಈ ಕೆಳಕಂಡ ಕನಿಷ್ಠ ವಯೋಮಿತಿಯನ್ನು ಹೊಂದಿರಬೇಕು ಹಾಗೂ ಗರಿಷ್ಠ ವಯೋಮಿತಿಯನ್ನು ಮೀರಿರಬಾರದು:

| | |
|---|---|
| **ಕನಿಷ್ಠ ವಯೋಮಿತಿ (ಎಲ್ಲಾ ವರ್ಗದ ಅಭ್ಯರ್ಥಿಗಳಿಗೆ)** | 18 ವರ್ಷಗಳು |
| **ಗರಿಷ್ಠ ವಯೋಮಿತಿ** | |
| ಸಾಮಾನ್ಯ ವರ್ಗದ ಅಭ್ಯರ್ಥಿಗಳು | 35 ವರ್ಷಗಳು |
| ಪ್ರವರ್ಗ-2(ಎ), 2(ಬಿ), 3(ಎ) ಮತ್ತು 3(ಬಿ) ಗೆ ಸೇರಿದ ಅಭ್ಯರ್ಥಿಗಳು | 38 ವರ್ಷಗಳು |
| ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ ಹಾಗೂ ಪ್ರವರ್ಗ-1 ಕ್ಕೆ ಸೇರಿದ ಅಭ್ಯರ್ಥಿಗಳು | 40 ವರ್ಷಗಳು |

**ವಯೋಮಿತಿ ಸಡಿಲಿಕೆಗಳು:**

ಈ ಕೆಳಗಿನ ಸಂದರ್ಭಗಳಲ್ಲಿ ನೇಮಕಾತಿಯ ಗರಿಷ್ಠ ವಯೋಮಿತಿಯನ್ನು ಕೆಳಗೆ ತಿಳಿಸಿರುವಷ್ಟರ ಮಟ್ಟಿಗೆ ಹೆಚ್ಚಿಸಲಾಗುವುದು:-

| | | |
|---|---|---|
| i) | ನಿಗಮ/ವಿವಿಧ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರಿಗೆ | ನಿಗಮ ಮತು ಎಸ್ಕಾಂಗಳಲ್ಲಿ ಈ ಹಿಂದೆ ಸೇವೆ ಸಲ್ಲಿಸಿರುವಷ್ಟು ವರ್ಷಗಳು ಅಥವಾ 10 ವರ್ಷಗಳ ಅವಧಿ, ಇವೆರಡರಲ್ಲಿ ಯಾವುದು ಕಡಿಮೆಯೋ ಅಷ್ಟು ವರ್ಷಗಳು. |
| ii) | ಮಾಜಿ ಸೈನಿಕರಾಗಿದ್ದಲ್ಲಿ | ಸಶಸ್ತ್ರ ಪಡೆಯಲ್ಲಿ ಸೇವೆ ಸಲ್ಲಿಸಿರುವ ಅವಧಿಗೆ ಮೂರು ವರ್ಷಗಳನ್ನು ಸೇರಿಸಿ ಗರಿಷ್ಠ 45 ವರ್ಷಗಳನ್ನು ಮೀರದಂತೆ. |
| iii) | ಅಂಗವಿಕಲ ಅಭ್ಯರ್ಥಿಗಳಿಗೆ | 10 ವರ್ಷಗಳು. |
| iv) | ಕವಿಪ್ರನಿನಿ/ಎಸ್ಕಾಂಗಳು ಮತ್ತು ಇತರೆ ಸಾರ್ವಜನಿಕ ವಲಯದ ವಿದ್ಯುತ್ ಪ್ರಸರಣ/ವಿತರಣಾ ಕ್ಷೇತ್ರಗಳಲ್ಲಿ ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡ ಅಭ್ಯರ್ಥಿಗಳು (ಯಾವುದೇ ಹೊರಗುತ್ತಿಗೆ ಏಜೆನ್ಸಿ ಮೂಲಕ ತೊಡಗಿಸಿಕೊಂಡಿಲ್ಲದ) ಮತ್ತು ಕನಿಷ್ಠ 5 ವರ್ಷಗಳು ಮತ್ತು ಅದಕ್ಕಿಂತ ಹೆಚ್ಚಿನ ಅನುಭವ ಹೊಂದಿರುವ ಅಭ್ಯರ್ಥಿಗಳು **(ಸಹಾಯಕ ಇಂಜಿನಿಯರ್ ಮತ್ತು ಕಿರಿಯ ಇಂಜಿನಿಯರ್ ಹುದ್ದೆಗಳಿಗೆ ಮಾತ್ರ)** | 5 ವರ್ಷಗಳು. |

7. **ಆನ್‌–ಲೈನ್ ಮೂಲಕ ಅರ್ಜಿ ಸಲ್ಲಿಕೆ:**

i) ಅರ್ಜಿಗಳನ್ನು ಕಡ್ಡಾಯವಾಗಿ ಕವಿಪ್ರನಿನಿ ವೆಬ್‌ಸೈಟ್ https://kptcl.karnataka.gov.in ನಲ್ಲಿ 'ಆನ್‌–ಲೈನ್' ಮೂಲಕ ಸಲ್ಲಿಸಬೇಕು. ಇತರೆ ಯಾವುದೇ ವಿಧಾನದಲ್ಲಿ ಸಲ್ಲಿಸಲಾಗುವ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

ii) 'ಆನ್‌–ಲೈನ್' ಮೂಲಕ ಅರ್ಜಿಗಳನ್ನು ಸಲ್ಲಿಸಲು ವೆಬ್‌ಸೈಟ್ ಸೌಲಭ್ಯವನ್ನು **ದಿನಾಂಕ: 07.02.2022** ರಿಂದ **ದಿನಾಂಕ: 07.03.2022** ರವರೆಗೆ ಒದಗಿಸಲಾಗುವುದು. ಅರ್ಜಿ ಸಲ್ಲಿಸಲು ದಿನಾಂಕ: **ದಿನಾಂಕ: 07.03.2022** ರ 17:00 ಗಂಟೆಯವರೆಗೆ (ಸಂಜೆ 5:00 ಗಂಟೆ) ಅವಕಾಶವಿರುತ್ತದೆ.

iii) ಆನ್‌–ಲೈನ್ ಮೂಲಕ ಅರ್ಜಿಗಳನ್ನು ಭರ್ತಿ ಮಾಡುವ ಮೊದಲು ಅರ್ಹ ಅಭ್ಯರ್ಥಿಗಳು ವೆಬ್‌ಸೈಟ್ ನಲ್ಲಿ ಲಭ್ಯವಿರುವ ಸೂಚನೆಗಳನ್ನು ಅಭ್ಯರ್ಥಿಗಳು ಓದಿಕೊಳ್ಳತಕ್ಕದ್ದು.

iv) ಅರ್ಜಿ ಶುಲ್ಕದ ನಮೂನೆಯನ್ನು ಕವಿಪ್ರನಿನಿ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಂಡು, ಅರ್ಜಿ ಶುಲ್ಕವನ್ನು ಕರ್ನಾಟಕ ರಾಜ್ಯದ ಯಾವುದಾದರೂ ಅಂಚೆ ಕಚೇರಿಯ ಮುಖಾಂತರ ಪಾವತಿಸಬೇಕಿರುತ್ತದೆ.

v) ಆನ್‌–ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸಿದ ನಂತರ ಅಭ್ಯರ್ಥಿಗಳು ಅಂಚೆ ಕಚೇರಿಯ ಚಲನ್‌ನ ಮುದ್ರಿತ ಪ್ರತಿಯನ್ನು ಪಡೆದುಕೊಳ್ಳಬೇಕು ಮತ್ತು ಅರ್ಜಿ ಶುಲ್ಕವನ್ನು ಕರ್ನಾಟಕ ರಾಜ್ಯದ ಅಧಿಕಾರ ವ್ಯಾಪ್ತಿಯಲ್ಲಿರುವ ಇ–ಅಂಚೆ ಕಚೇರಿಗಳಲ್ಲಿ ಪಾವತಿಸಬೇಕು. ಚಲನ್ ಪ್ರತಿಯನ್ನು ಕವಿಪ್ರನಿನಿಯಿಂದ ಕೋರಿದಾಗ ಹಾಜರುಪಡಿಸತಕ್ಕದ್ದು.

vi) ಇ–ಅಂಚೆ ಕಚೇರಿಯಲ್ಲಿ ಅರ್ಜಿ ಶುಲ್ಕ ಪಾವತಿಸಲು **ದಿನಾಂಕ: 09.03.2022** ಕೊನೆಯ ದಿನಾಂಕವಾಗಿರುತ್ತದೆ.

vii) ಅಂಚೆ ಕಚೇರಿಗಳಲ್ಲಿ ಪಾವತಿ ಮಾಡಿದ ಅರ್ಜಿ ಶುಲ್ಕದ ಬಗ್ಗೆ, ಮೊತ್ತ ಪಾವತಿ ಮಾಡಿದ ಎರಡು ದಿನಗಳ ನಂತರ www.karnatakapost.gov.in ರಲ್ಲಿ ದೃಢೀಕರಿಸಿಕೊಳ್ಳಬಹುದಾಗಿದೆ.

viii) ಚೆಕ್, ಡಿಮ್ಯಾಂಡ್ ಡ್ರಾಫ್ಟ್, ಮನಿ ಆರ್ಡರ್, ಪೋಸ್ಟಲ್ ಆರ್ಡರ್ ಮುಂತಾದ ಯಾವುದೇ ವಿಧಾನದಿಂದ ಅರ್ಜಿ ಶುಲ್ಕವನ್ನು ಸ್ವೀಕರಿಸಲಾಗುವುದಿಲ್ಲ.

ix) ಅಭ್ಯರ್ಥಿಗಳು ನಿಗದಿಪಡಿಸಿರುವ ಅರ್ಜಿ ಶುಲ್ಕವನ್ನು ಕಡ್ಡಾಯವಾಗಿ ಪಾವತಿಸತಕ್ಕದ್ದು. ಅರ್ಜಿ ಶುಲ್ಕವನ್ನು ಸಂದಾಯ ಮಾಡದಿದ್ದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

x) ದಾಖಲೆಗಳು/ಭಾವಚಿತ್ರ/ಸಹಿಯನ್ನು ಅಪ್‌ಲೋಡ್ ಮಾಡದೇ ಇರುವ/ಅಸ್ಪಷ್ಟ ದಾಖಲೆಗಳನ್ನು ಅಪ್‌ಲೋಡ್ ಮಾಡಿರುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

xi) ಅಭ್ಯರ್ಥಿಗಳು ಒಂದು ನಿರ್ದಿಷ್ಟ ಹುದ್ದೆಗೆ ಒಂದಕ್ಕಿಂತ ಹೆಚ್ಚಿನ ಅರ್ಜಿಗಳನ್ನು ಸಲ್ಲಿಸಿದ್ದಲ್ಲಿ, ಅವುಗಳ ಪೈಕಿ ಇತ್ತೀಚಿನ ಅರ್ಜಿಯನ್ನು (Most Recent Application) ಮಾತ್ರ ಪರಿಗಣಿಸಲಾಗುವುದು. ಆದಾಗ್ಯೂ, ಪ್ರತಿಯೊಂದು ಅರ್ಜಿಗೂ ಅಭ್ಯರ್ಥಿಗಳು ಪ್ರತ್ಯೇಕವಾಗಿ ಅರ್ಜಿ ಶುಲ್ಕ ಪಾವತಿಸತಕ್ಕದ್ದು.

xii) ಅಭ್ಯರ್ಥಿಗಳು ಒಂದಕ್ಕಿಂತ ಹೆಚ್ಚು ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಬಯಸಿದ್ದಲ್ಲಿ, ಆನ್‌–ಲೈನ್ ಅರ್ಜಿ ಮತ್ತು ನಿಗದಿತ ಶುಲ್ಕ ಎರಡನ್ನೂ ಪ್ರತ್ಯೇಕವಾಗಿ ಸಲ್ಲಿಸತಕ್ಕದ್ದು.

xiii) ಅಭ್ಯರ್ಥಿಗಳು ತಮ್ಮ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳನ್ನು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದ ಒಳಗೆ ಕಡ್ಡಾಯವಾಗಿ ಪಡೆದಿಟ್ಟುಕೊಂಡು, ಆನ್‌–ಲೈನ್ ಅರ್ಜಿಯೊಂದಿಗೆ 'ಅಪ್–ಲೋಡ್' ಮಾಡತಕ್ಕದ್ದು. ತಪ್ಪಿದಲ್ಲಿ, ಅವರ ಮೀಸಲಾತಿ/ಅಭ್ಯರ್ಥಿತನವನ್ನು ಪರಿಗಣಿಸಲಾಗುವುದಿಲ್ಲ. ಮುಂದುವರೆದು, ದಾಖಲಾತಿ ಪರಿಶೀಲನಾ ಸಮಯದಲ್ಲಿ ಇದೇ ಪ್ರಮಾಣ ಪತ್ರಗಳ ಮೂಲ ಪ್ರತಿಗಳನ್ನು ಪರಿಶೀಲನೆಗಾಗಿ ಹಾಜರುಪಡಿಸತಕ್ಕದ್ದು.

xiv) ಕಲ್ಯಾಣ ಕರ್ನಾಟಕ ಪ್ರದೇಶ ವ್ಯಾಪ್ತಿಗೆ ಸಂಬಂಧಿಸಿದಂತೆ ಆಯ್ಕೆ ಬಯಸುವ ಅಭ್ಯರ್ಥಿಗಳು, ಆನ್‌–ಲೈನ್ ಅರ್ಜಿಯ ಸೂಕ್ತ ಜಾಗದಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶ ವ್ಯಾಪ್ತಿಗೆ ಸೇರಿರುವುದರ ಬಗ್ಗೆ ನಮೂದಿಸತಕ್ಕದ್ದು. ಅಂತಹ ಅಭ್ಯರ್ಥಿಯು ಕಲ್ಯಾಣ ಕರ್ನಾಟಕ ಪ್ರದೇಶ ವ್ಯಾಪ್ತಿಗೆ ಸೇರಿರುವ ಬಗ್ಗೆ ನಿಗದಿತ ನಮೂನೆಯಲ್ಲಿ ಪಡೆದಿರುವ ಪ್ರಮಾಣ ಪತ್ರವನ್ನು ತಪ್ಪದೆ 'ಅಪ್–ಲೋಡ್' ಮಾಡತಕ್ಕದ್ದು. ತಪ್ಪಿದಲ್ಲಿ, ಅವರನ್ನು ಕಲ್ಯಾಣ ಕರ್ನಾಟಕ ಪ್ರದೇಶ ವ್ಯಾಪ್ತಿಗೆ ಪರಿಗಣಿಸಲಾಗುವುದಿಲ್ಲ. ಮುಂದುವರೆದು, ದಾಖಲಾತಿ ಪರಿಶೀಲನಾ ಸಮಯದಲ್ಲಿ ಇದೇ ಪ್ರಮಾಣ ಪತ್ರಗಳ ಮೂಲ ಪ್ರತಿಗಳನ್ನು ಪರಿಶೀಲನೆಗಾಗಿ ಹಾಜರುಪಡಿಸತಕ್ಕದ್ದು.

**8. ಆಯ್ಕೆ ವಿಧಾನ:**

i) ಸಹಾಯಕ ಇಂಜಿನಿಯರ್(ವಿದ್ಯುತ್/ಸಿವಿಲ್), ಕಿರಿಯ ಇಂಜಿನಿಯರ್(ವಿದ್ಯುತ್/ಸಿವಿಲ್) ಮತ್ತು ಕಿರಿಯ ಸಹಾಯಕ ಹುದ್ದೆಗಳಿಗೆ ನೇಮಕಾತಿಯನ್ನು ಆಪ್ಟಿಟ್ಯೂಡ್ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಆಧಾರದಲ್ಲಿ ಅರ್ಹತೆಯ ಆಧಾರದ ಮೇಲೆ ಮಾತ್ರ, ಕರ್ನಾಟಕ ಸರ್ಕಾರದಿಂದ ಕಾಲಕಾಲಕ್ಕೆ ಹೊರಡಿಸಲಾದ ಮೀಸಲಾತಿ ನಿಯಮಗಳನ್ನು ಅನುಸರಿಸಿ ಮಾಡಲಾಗುವುದು.

ii) **ಆಪ್ಟಿಟ್ಯೂಡ್ ಪರೀಕ್ಷೆಯಲ್ಲಿ ಕನಿಷ್ಠ ಶೇಕಡ 35 ರಷ್ಟು ಅಂಕಗಳನ್ನು ಗಳಿಸಿದ ಅಭ್ಯರ್ಥಿಗಳು ಮಾತ್ರ ಸಹಾಯಕ ಇಂಜಿನಿಯರ್(ವಿದ್ಯುತ್/ಸಿವಿಲ್), ಕಿರಿಯ ಇಂಜಿನಿಯರ್(ವಿದ್ಯುತ್/ಸಿವಿಲ್) ಮತ್ತು ಕಿರಿಯ ಸಹಾಯಕ ಹುದ್ದೆಗಳ ನೇಮಕಾತಿಗೆ ಅರ್ಹರಾಗಿರುತ್ತಾರೆ.**

iii) ಆಪ್ಟಿಟ್ಯೂಡ್ ಪರೀಕ್ಷೆಯ ವಿಧಾನ ಹಾಗೂ ದಿನಾಂಕವನ್ನು ನಂತರದ ದಿನಗಳಲ್ಲಿ ತಿಳಿಸಲಾಗುವುದು.

**9. ವಿಕಲಚೇತನ ಅಭ್ಯರ್ಥಿಗಳು:**

ಸರ್ಕಾರದ ಆದೇಶ ಸಂಖ್ಯೆ: ಡಬ್ಲ್ಯೂಸಿಡಿ 13 ಪಿಹೆಚ್‌ಪಿ 2015, ದಿನಾಂಕ: 15.06.2015 ರ ಅನ್ವಯ, ಪ್ರತಿಯೊಂದು ಹುದ್ದೆಗಳಿಗೆ ಎದುರಾಗಿ ಗುರುತಿಸಲಾಗಿರುವ ವಿಕಲಾಂಗತೆಯ ಸ್ವರೂಪ ಹೊಂದಿರುವ ವಿಕಲಚೇತನ ಅಭ್ಯರ್ಥಿಗಳನ್ನು ಮಾತ್ರ ವಿಕಲಚೇತನ ಅಭ್ಯರ್ಥಿ ಕೋಟಾದ ಅಡಿಯಲ್ಲಿ ಆಯ್ಕೆಗೆ ಪರಿಗಣಿಸಲಾಗುತ್ತದೆ.

**ಸೂಚನೆ:**

i) ಪ್ರತಿ ಹುದ್ದೆಗೆ ಅಧಿಸೂಚಿತ ಅಂಗವಿಕಲತೆಯ ಸ್ವರೂಪ ಹೊರತುಪಡಿಸಿ, ಇತರೆ ಅಂಗವಿಕಲತೆಯ ಸ್ವರೂಪವನ್ನು ಹೊಂದಿರುವ ವ್ಯಕ್ತಿಗಳನ್ನು ಆಯ್ಕೆಗೆ ಪರಿಗಣಿಸಲಾಗುವುದಿಲ್ಲ.

ii) **ಅಂಗವಿಕಲತೆ ಮೀಸಲಾತಿ ಪಡೆಯಬಯಸುವ ವಿಕಲಚೇತನ ಅಭ್ಯರ್ಥಿಗಳು, ನಿಗಮವು ಅಂಗವಿಕಲತೆ ಬಗ್ಗೆ ವೈದ್ಯಕೀಯ ಮಂಡಳಿಯಿಂದ ನಂತರದಲ್ಲಿ ನಡೆಸುವ ವೈದ್ಯಕೀಯ ಪರೀಕ್ಷೆಯ ವರದಿಗೆ ಬದ್ಧರಾಗಿರತಕ್ಕದ್ದು.**

iii) ಕಿರಿಯ ಸಹಾಯಕ ಹುದ್ದೆಗೆ ಅರ್ಜಿ ಸಲ್ಲಿಸ ಬಯಸುವ ಅಂಧ/ದೃಷ್ಟಿಮಾಂದ್ಯ ಅಭ್ಯರ್ಥಿಗಳು ತಮ್ಮ ಅರ್ಜಿಯಲ್ಲಿ Blind/Low Vision ಅಂಗವಿಕಲತೆಗಾಗಿ ಮೀಸಲಾತಿಯನ್ನು ಕೋರಿದ್ದಲ್ಲಿ, ಸದರಿ ಅಭ್ಯರ್ಥಿಗಳು ಕನ್ನಡ ಭಾಷಾ ಪರೀಕ್ಷೆ ಹಾಗೂ ಆಪ್ಟಿಟ್ಯೂಡ್ ಪರೀಕ್ಷೆಯನ್ನು ಬರೆಯಲು ಲಿಪಿಕಾರರ (Scribe) ಸಹಾಯದ ಅವಶ್ಯಕತೆ ಇದೆಯೇ ಎಂಬುದರ ಬಗ್ಗೆ ಆನ್-ಲೈನ್ ಅರ್ಜಿಯಲ್ಲಿ ನಿರ್ದಿಷ್ಟವಾಗಿ ತಿಳಿಸತಕ್ಕದ್ದು. ಲಿಪಿಕಾರರ (Scribe) ಸಹಾಯದ ಅವಶ್ಯಕತೆ ಇದೆ ಎಂದು ಅರ್ಜಿಯಲ್ಲಿ ನಮೂದಿಸಿರುವ ಅಭ್ಯರ್ಥಿಗಳಿಗೆ ಮಾತ್ರ ಲಿಪಿಕಾರರ (Scribe) ಸೌಲಭ್ಯವನ್ನು ಒದಗಿಸಲಾಗುವುದು.

iv) ಅಂಧ/ದೃಷ್ಟಿಮಾಂದ್ಯ ಅಭ್ಯರ್ಥಿಗಳಿಗೆ ಲಿಪಿಕಾರರ (Scribe) ಸೌಲಭ್ಯವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಒದಗಿಸಲಾಗುವುದು.

**10. ವಿವಿಧ ಹುದ್ದೆಗಳಿಗೆ ನಿಗದಿಪಡಿಸಿರುವ ವಿಕಲಾಂಗತೆಯ ಸ್ವರೂಪ:**

| ಕ್ರ. ಸಂ. | ಹುದ್ದೆಯ ಹೆಸರು | ವಿಕಲಾಂಗತೆಯ ಸ್ವರೂಪ |
|---|---|---|
| i) | ಸಹಾಯಕ ಇಂಜಿನಿಯರ್(ವಿ) | a) **Locomotor disability or Cerebral Palsy:**<br>One Leg (OL)<br>b) Hearing Impairment (HH) |
| ii) | ಸಹಾಯಕ ಇಂಜಿನಿಯರ್(ಸಿವಿಲ್) | a) **Locomotor disability or Cerebral Palsy:**<br>One Leg (OL), One Arm (OA)<br>b) Hearing Impairment (HH) |
| iii) | ಕಿರಿಯ ಇಂಜಿನಿಯರ್(ವಿ) | a) **Locomotor disability:**<br>One Leg (OL)<br>b) Hearing Impairment (HH) |
| iv) | ಕಿರಿಯ ಇಂಜಿನಿಯರ್(ಸಿವಿಲ್) | a) **Locomotor disability:**<br>One Leg (OL), One Arm (OA)<br>b) Hearing Impairment (HH) |
| v) | ಕಿರಿಯ ಸಹಾಯಕ | a) Blind (B) and Low Vision (LV)<br>b) **Locomotor disability :**<br>One Leg (OL), One Arm (OA)<br>BL (Both Legs) & OAL(One Arm One Leg)<br>c) Hearing Impairment (HH) |

**11. <u>ಆಪ್ಟಿಟ್ಯೂಡ್ ಪರೀಕ್ಷೆಗೂ ಮುನ್ನ ಗುಂಪು–ಬಿ ಮತ್ತು ಸಿ ಪದವೃಂದದ ಹುದ್ದೆಗಳಿಗೆ ಕಡ್ಡಾಯ ಕನ್ನಡ ಭಾಷಾ ಪರೀಕ್ಷೆ:</u>**

i) ಮೇಲೆ ತಿಳಿಸಿರುವ ಹುದ್ದೆಗಳಿಗೆ ಅರ್ಜಿಯನ್ನು ಸಲ್ಲಿಸುವ ಅಭ್ಯರ್ಥಿಗಳು, ಎಸ್.ಎಸ್.ಎಲ್.ಸಿ., ಪಿ.ಯು.ಸಿ., ಅಥವಾ ಮೇಲ್ಪಟ್ಟ ಯಾವುದೇ ಪರೀಕ್ಷೆಯಲ್ಲಿ ಕನ್ನಡವನ್ನು **ಮುಖ್ಯ ಭಾಷೆಯಾಗಿ (ಪ್ರಥಮ ಭಾಷೆ)** ಅಥವಾ **ದ್ವಿತೀಯ ಭಾಷೆಯಾಗಿ** ಅಥವಾ ಐಚ್ಛಿಕ ವಿಷಯವಾಗಿ (ಆದರೆ ಸಂಯುಕ್ತ ಪತ್ರಿಕೆಯ ವಿಷಯಗಳಲ್ಲೊಂದಾಗಿರಬಾರದು) ಅಥವಾ ಮೇಲಿನ ಪರೀಕ್ಷೆಗಳಲ್ಲಿ **ಕನ್ನಡ ಮಾಧ್ಯಮದಲ್ಲಿ** ವ್ಯಾಸಂಗ ಮಾಡಿ ತೇರ್ಗಡೆಯಾಗಿದ್ದಲ್ಲಿ, ಕಡ್ಡಾಯ ಕನ್ನಡ ಭಾಷಾ ಪರೀಕ್ಷೆಯಲ್ಲಿ ಉತ್ತೀರ್ಣತೆ ಹೊಂದುವುದರಿಂದ ವಿನಾಯಿತಿ ಹೊಂದಿರುತ್ತಾರೆ.

ii) ಮೇಲೆ ತಿಳಿಸಿರುವಂತೆ ಕನ್ನಡ ಭಾಷೆಯನ್ನು ಅಧ್ಯಯನ ಮಾಡಿರದ ಅಭ್ಯರ್ಥಿಗಳು, ಮೇಲೆ ತಿಳಿಸಿರುವ ಹುದ್ದೆಗಳ ಆಯ್ಕೆಗೆ ಅರ್ಹರಾಗಲು ಆಪ್ಟಿಟ್ಯೂಡ್ ಪರೀಕ್ಷೆಗೂ ಮೊದಲು ನಡೆಸಲಾಗುವ ಕನ್ನಡ ಭಾಷಾ ಪರೀಕ್ಷೆಯಲ್ಲಿ ಅರ್ಹರಾಗತಕ್ಕದ್ದು. ಈ ಪರೀಕ್ಷೆಯು ವಿವರಣಾತ್ಮಕ ಪತ್ರಿಕೆಯಾಗಿದ್ದು, ಗರಿಷ್ಟ 150 ಅಂಕಗಳನ್ನು ಒಳಗೊಂಡಿರುತ್ತದೆ ಮತ್ತು ಅಭ್ಯರ್ಥಿಗಳು ಇದರಲ್ಲಿ ಅರ್ಹತೆ ಗಳಿಸಲು ಕನಿಷ್ಟ 50 ಅಂಕಗಳನ್ನು ಗಳಿಸಬೇಕು. **<u>ಕನಿಷ್ಟ 50 ಅಂಕಗಳನ್ನು ಗಳಿಸದ ಅಭ್ಯರ್ಥಿಗಳು ಆಯ್ಕೆಗೆ ಅರ್ಹರಾಗುವುದಿಲ್ಲ.</u>** ಕನ್ನಡ ಭಾಷಾ ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು ಹುದ್ದೆಗಳ ಆಯ್ಕೆಗೆ ಪರಿಗಣಿಸಲಾಗುವುದಿಲ್ಲ.

iii) ಕಡ್ಡಾಯ ಕನ್ನಡ ಭಾಷಾ ಪರೀಕ್ಷೆಯಲ್ಲಿ ಕನಿಷ್ಠ 50 ಅಂಕಗಳನ್ನು ಗಳಿಸದ ಅಭ್ಯರ್ಥಿಗಳ ಆಪ್ಟಿಟ್ಯೂಡ್ ಪರೀಕ್ಷೆಯ ಅಂಕಗಳನ್ನು ಪ್ರಕಟಿಸಲಾಗುವುದಿಲ್ಲ.

iv) ಸದರಿ ಪರೀಕ್ಷೆಯು ಎಸ್.ಎಸ್.ಎಲ್.ಸಿ. ಕನ್ನಡ ಮೊದಲನೇ ಭಾಷೆಯ ಮಟ್ಟದ್ದಾಗಿರುತ್ತದೆ.

v) ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಕನ್ನಡ ಭಾಷೆಯನ್ನು ತೃತೀಯ ಭಾಷೆಯನ್ನಾಗಿ ಅಭ್ಯಸಿಸಿದ್ದಲ್ಲಿ ಅಥವಾ ಕ್ರಮ ಸಂಖ್ಯೆ: 11 (i) ರಲ್ಲಿ ತಿಳಿಸಿರುವಂತೆ ಇತರೆ ಕನ್ನಡ ಭಾಷಾ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿರದಂತಹ ಅಭ್ಯರ್ಥಿಗಳಿಗೆ ಕನ್ನಡ ಭಾಷಾ ಪರೀಕ್ಷೆಯಿಂದ ವಿನಾಯಿತಿ ಪಡೆಯಲು ಅವಕಾಶವಿರುವುದಿಲ್ಲ ಹಾಗೂ ಇಂತಹ ಅಭ್ಯರ್ಥಿಗಳು ಕನ್ನಡ ಭಾಷಾ ಪರೀಕ್ಷೆಯನ್ನು ಕಡ್ಡಾಯವಾಗಿ ತೆಗೆದುಕೊಳ್ಳಬೇಕಿರುತ್ತದೆ.

vi) ಇಂಜನಿಯರಿಂಗ್ ಅಥವಾ ಡಿಪ್ಲೊಮಾ ದಲ್ಲಿ ಕನ್ನಡ ಭಾಷಾ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವವರು ಕನ್ನಡ ಭಾಷಾ ಪರೀಕ್ಷೆಯಿಂದ ವಿನಾಯಿತಿ ಕೋರಲು ಅವಕಾಶವಿರುವುದಿಲ್ಲ.

vii) ಕಡ್ಡಾಯ ಕನ್ನಡ ಭಾಷಾ ಪರೀಕ್ಷೆಯಿಂದ ವಿನಾಯಿತಿ ಪಡೆಯಲು ಅರ್ಜಿಯ ನಿಗದಿತ ಸ್ಥಳದಲ್ಲಿ ವಿವರಗಳನ್ನು ನೀಡತಕ್ಕದ್ದು. ಸರಿಯಾದ ಮಾಹಿತಿ ಒದಗಿಸದಿದ್ದಲ್ಲಿ, ಮೇಲಿನ ವಿನಾಯಿತಿಗಳನ್ನು ಪಡೆಯಲು ಅರ್ಹತೆ ನೀಡುವುದಿಲ್ಲ ಹಾಗೂ ವಿನಾಯಿತಿ ಪಡೆಯಲು ತಪ್ಪಾಗಿ ಮಾಹಿತಿ ನೀಡಿದ ಅಭ್ಯರ್ಥಿಗಳನ್ನು ಅನರ್ಹಗೊಳಿಸಲಾಗುವುದು. ಮುಂದುವರೆದು, ಅಭ್ಯರ್ಥಿಗಳು ಈ ಮಾಹಿತಿಯನ್ನು ತಪ್ಪಾಗಿ ನೀಡಿದ ನಂತರ ಇದನ್ನು ಸರಿಪಡಿಸಿಕೊಳ್ಳಲು ಅವಕಾಶವಿರುವುದಿಲ್ಲ. ಆದುದರಿಂದ ಅಭ್ಯರ್ಥಿಗಳು ಅರ್ಜಿ ಭರ್ತಿ ಮಾಡುವಾಗ ಎಲ್ಲಾ ವಿಷಯಗಳನ್ನು ಪರಿಶೀಲಿಸಿ, ಸರಿಯಾಗಿರುವ ಬಗ್ಗೆ ಖಚಿತಪಡಿಸಿಕೊಂಡ ನಂತರವೇ ಒಪ್ಪಿಗೆಯನ್ನು ನೀಡುವಂತೆ ಸೂಚಿಸಲಾಗಿದೆ.

viii) ಕನ್ನಡ ಭಾಷಾ ಪರೀಕ್ಷೆಯನ್ನು ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಅಥವಾ ಕವಿಪ್ರನಿನಿಯು ನಿಗದಿಪಡಿಸುವ ಕೇಂದ್ರಗಳಲ್ಲಿ ನಡೆಸಲಾಗುವುದು. ಈ ವಿಷಯದಲ್ಲಿ ಕವಿಪ್ರನಿನಿಯ ತೀರ್ಮಾನವೇ ಅಂತಿಮವಾಗಿರುತ್ತದೆ. ಪರೀಕ್ಷಾ ಕೇಂದ್ರಗಳ ಬದಲಾವಣೆ ಕುರಿತಂತೆ ಸಲ್ಲಿಸಲಾಗುವ ಕೋರಿಕೆಗಳನ್ನು ತಿರಸ್ಕರಿಸಲಾಗುವುದು.

ix) ಒಬ್ಬ ಅಭ್ಯರ್ಥಿಯು ಒಂದಕ್ಕಿಂತ ಹೆಚ್ಚು ಪದವೃಂದದ ಹುದ್ದೆಗಳಿಗೆ ಅರ್ಜಿ ಸಲ್ಲಿಸಿದ್ದಲ್ಲಿ, ಅವರು ಸಲ್ಲಿಸಿರುವ ಎಲ್ಲಾ ಅರ್ಜಿಗಳನ್ನು ಒಟ್ಟುಗೂಡಿಸಿ, ಕಡ್ಡಾಯ ಕನ್ನಡ ಭಾಷಾ ಪರೀಕ್ಷೆಗೆ ಪರಿಗಣಿಸಲಾಗುವುದು ಹಾಗೂ ಸದರಿಯವರು ಕಡ್ಡಾಯ ಕನ್ನಡ ಭಾಷಾ ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು ಎಲ್ಲಾ ಪದವೃಂದದ ಅರ್ಜಿಗಳಿಗೆ ಪರಿಗಣಿಸಲಾಗುವುದು. ಇಂತಹ ಅಭ್ಯರ್ಥಿಗಳು ಪ್ರತ್ಯೇಕವಾಗಿ ಪ್ರತಿ ಪದವೃಂದದ ಹುದ್ದೆಗೆ ಕನ್ನಡ ಭಾಷಾ ಪರೀಕ್ಷೆಯನ್ನು ಬರೆಯತಕ್ಕದ್ದಲ್ಲ.

x) ಕನ್ನಡ ಭಾಷಾ ಪರೀಕ್ಷೆಗೆ ಹಾಜರಾಗಬೇಕಾದ ಅಭ್ಯರ್ಥಿಗಳ ಪಟ್ಟಿಯನ್ನು, ಇತರೆ ವಿವರಗಳಾದ ಪರೀಕ್ಷಾ ದಿನಾಂಕ, ಸಮಯ ಮತ್ತು ಸ್ಥಳಗಳ ಮಾಹಿತಿಯನ್ನು ನಂತರದ ದಿನಾಂಕದಲ್ಲಿ ಕವಿಪ್ರನಿನಿಯ ಅಧಿಕೃತ ವೆಬ್ ಸೈಟ್ <u>https://kptcl.karnataka.gov.in</u> ನಲ್ಲಿ ಪ್ರಕಟಿಸಲಾಗುವುದು.

**12. ಆಪ್ಟಿಟ್ಯೂಡ್ ಪರೀಕ್ಷೆ:**

i) ಆಪ್ಟಿಟ್ಯೂಡ್ ಪರೀಕ್ಷೆಯು 100 ಅಂಕಗಳ ವಸ್ತು ನಿಷ್ಠ ಬಹು ಆಯ್ಕೆಯ (Objective Multiple Choice) ವಿಧಾನದ ಎರಡು (2) ಗಂಟೆ ಅವಧಿಯ ಪರೀಕ್ಷೆಯಾಗಿರುತ್ತದೆ. ಆಪ್ಟಿಟ್ಯೂಡ್ ಪರೀಕ್ಷೆಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಆಫ್‌-ಲೈನ್ ಓ.ಎಂ.ಆರ್ (Offline OMR Type) ಮಾದರಿಯಲ್ಲಿ ನಡೆಸಲಾಗುವುದು. ಪ್ರತಿ ಪ್ರಶ್ನೆಯು ಒಂದು (1) ಅಂಕವನ್ನು ಹೊಂದಿರುತ್ತದೆ. ಈ ಪರೀಕ್ಷೆಯಲ್ಲಿ ಋಣಾತ್ಮಕ (negative marking) ಅಂಕಗಳಿದ್ದು, ಪ್ರತಿ ತಪ್ಪು ಉತ್ತರಕ್ಕೆ 0.25 ಅಂಕಗಳನ್ನು ಕಡಿತಗೊಳಿಸಲಾಗುತ್ತದೆ. ಪ್ರಶ್ನೆಗಳಿಗೆ ಉತ್ತರಿಸದಿದ್ದಲ್ಲಿ ಯಾವುದೇ ಅಂಕಗಳನ್ನು ನೀಡಲಾಗುವುದಿಲ್ಲ.

ii) ಗುಂಪು-ಬಿ ಹುದ್ದೆಗಳಾದ ಸಹಾಯಕ ಇಂಜಿನಿಯರ್(ವಿದ್ಯುತ್/ಸಿವಿಲ್) ಮತ್ತು ಗುಂಪು-ಸಿ ಹುದ್ದೆಗಳಾದ ಕಿರಿಯ ಇಂಜಿನಿಯರ್(ವಿದ್ಯುತ್/ಸಿವಿಲ್) ಗಳಿಗೆ ಪ್ರಶ್ನೆ ಪತ್ರಿಕೆಯು ಕನ್ನಡ ಮತ್ತು ಇಂಗ್ಲೀಷ್ ಆವೃತ್ತಿಯಲ್ಲಿರುತ್ತದೆ.

iii) ಕಿರಿಯ ಸಹಾಯಕ ಹುದ್ದೆಗೆ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಿಗೆ, ಕಂಪ್ಯೂಟರ್ ಸಾಕ್ಷರತೆ, ಸಾಮಾನ್ಯ ಜ್ಞಾನ ಮತ್ತು ಆಪ್ಟಿಟ್ಯೂಡ್ ಪತ್ರಿಕೆಯು ಕನ್ನಡ ಮತ್ತು ಇಂಗ್ಲೀಷ್ ಆವೃತ್ತಿಯಲ್ಲಿರುತ್ತವೆ.

iv) ಆಪ್ಟಿಟ್ಯೂಡ್ ಪರೀಕ್ಷೆಯನ್ನು ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಅಥವಾ ಕವಿಪ್ರನಿನಿಯು ನಿಗದಿಪಡಿಸುವ ಕೇಂದ್ರಗಳಲ್ಲಿ ನಡೆಸಲಾಗುವುದು. ಈ ವಿಷಯದಲ್ಲಿ ಕವಿಪ್ರನಿನಿಯ ತೀರ್ಮಾನವೇ ಅಂತಿಮವಾಗಿರುತ್ತದೆ. ಪರೀಕ್ಷಾ ಕೇಂದ್ರಗಳ ಬದಲಾವಣೆ ಕುರಿತಂತೆ ಸಲ್ಲಿಸಲಾಗುವ ಕೋರಿಕೆಗಳನ್ನು ತಿರಸ್ಕರಿಸಲಾಗುವುದು.

v) ಆಪ್ಟಿಟ್ಯೂಡ್ ಪರೀಕ್ಷೆಗೆ ಅರ್ಹತೆ ಹೊಂದಿರುವ ಅಭ್ಯರ್ಥಿಗಳ ಪಟ್ಟಿಯನ್ನು ಇತರೆ ವಿವರಗಳಾದ ಪರೀಕ್ಷಾ ದಿನಾಂಕ, ಸಮಯ ಮತ್ತು ಸ್ಥಳಗಳ ಮಾಹಿತಿಯನ್ನು ನಂತರದ ದಿನಾಂಕದಲ್ಲಿ ಕವಿಪ್ರನಿನಿಯ ಅಧಿಕೃತ ವೆಬ್ ಸೈಟ್ https://kptcl.karnataka.gov.in ನಲ್ಲಿ ಪ್ರಕಟಿಸಲಾಗುವುದು.

vi) ಅಭ್ಯರ್ಥಿಗಳು ತಮ್ಮ ಸ್ವಂತ ವೆಚ್ಚದಲ್ಲಿ ಕನ್ನಡ ಭಾಷಾ ಪರೀಕ್ಷೆ ಹಾಗೂ ಆಪ್ಟಿಟ್ಯೂಡ್ ಪರೀಕ್ಷೆಗೆ ಹಾಜರಾಗತಕ್ಕದ್ದು.

vii) ಒಬ್ಬ ಅಭ್ಯರ್ಥಿಯು ಒಂದು ನಿರ್ದಿಷ್ಟ ಪದವೃಂದದ ಹುದ್ದೆಗೆ ಕಲ್ಯಾಣ ಕರ್ನಾಟಕ ಪ್ರದೇಶ ವ್ಯಾಪ್ತಿ (ಸ್ಥಳೀಯ ವೃಂದ) ಮತ್ತು ಕಲ್ಯಾಣ ಕರ್ನಾಟಕೇತರ ಪ್ರದೇಶ ವ್ಯಾಪ್ತಿ (ಮಿಕ್ಕುಳಿದ ವೃಂದ) ಗಳೆರಡರಲ್ಲೂ ಅರ್ಜಿ ಸಲ್ಲಿಸಿದ್ದಲ್ಲಿ, ಆಪ್ಟಿಟ್ಯೂಡ್ ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು ಎರಡೂ ಹುದ್ದೆಗಳ ಆಯ್ಕೆಗೆ ಪರಿಗಣಿಸಲಾಗುವುದು.

**13. ಆಪ್ಟಿಟ್ಯೂಡ್ ಪರೀಕ್ಷೆಗೆ ಪಠ್ಯಕ್ರಮ:**

| | | | |
|---|---|---|---|
| i) | Assistant Engineer (Elec.) | : | 75 Marks - Visvesvaraya Technological University (VTU) syllabus of BE Electrical / Electrical & Electronics discipline.<br>25 Marks - General awareness & Aptitude. |
| ii) | Assistant Engineer(Civil) | : | 75 Marks - Visvesvaraya Technological University (VTU) syllabus of BE Civil Engineering discipline.<br>25 Marks - General awareness & Aptitude |
| iii) | Junior Engineer (Elec.) | : | 75 Marks - Diploma syllabus Electrical/Electrical & Electronics discipline of Department of Technical Education, Government of Karnataka.<br>25 Marks - General awareness & Aptitude. |
| iv) | Junior Engineer (Civil) | : | 75 Marks - Diploma syllabus - Civil Engineering discipline of Department of Technical Education, Government of Karnataka.<br>25 Marks - General awareness & Aptitude |

| | | | |
|---|---|---|---|
| v) | Junior Assistant | : | 20 Marks - Computer Literacy.<br>50 Marks - General awareness and Aptitude.<br>30 Marks - General English/General Kannada. |

**14. ಜಾತಿ ಮೀಸಲಾತಿ ಮತ್ತು ಸಮತಳ ಮೀಸಲಾತಿ ಕೋರುವ ಅಭ್ಯರ್ಥಿಗಳು ಮತ್ತು ಅದಕ್ಕೆ ಸಂಬಂಧಪಟ್ಟ ಪ್ರಮಾಣ ಪತ್ರಗಳು ಹಾಗೂ ಅದರ ನಿಯಮಗಳು:-**

| | | |
|---|---|---|
| i) | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳು | **'ನಮೂನೆ-ಡಿ'**<br>ಪ್ರಮಾಣ ಪತ್ರಗಳು ಜೀವಿತ ಅವಧಿಯವರೆಗೆ ಅಥವಾ ರದ್ದು ಮಾಡುವವರೆಗೆ ಸಿಂಧುತ್ವವನ್ನು ಹೊಂದಿದ್ದು, ಇಂತಹ ಪ್ರಮಾಣ ಪತ್ರಗಳನ್ನು, ದಿನಾಂಕದ ಮಿತಿಯಿಲ್ಲದೇ ಪರಿಗಣಿಸಲಾಗುವುದು (ಸರ್ಕಾರದ ಸುತ್ತೋಲೆ ಸಂಖ್ಯೆ: SWD 155 BCA 2011 ದಿನಾಂಕ: 22.02.2012) |
| ii) | ಪ್ರವರ್ಗ-1 ಕ್ಕೆ ಸೇರಿದ ಅಭ್ಯರ್ಥಿಗಳು | **'ನಮೂನೆ-ಇ'**<br>ಪ್ರಮಾಣ ಪತ್ರಗಳು ಜೀವಿತ ಅವಧಿಯವರೆಗೆ ಅಥವಾ ರದ್ದು ಮಾಡುವವರೆಗೆ ಸಿಂಧುತ್ವವನ್ನು ಹೊಂದಿದ್ದು, ಇಂತಹ ಪ್ರಮಾಣ ಪತ್ರಗಳನ್ನು, ದಿನಾಂಕದ ಮಿತಿಯಿಲ್ಲದೇ ಪರಿಗಣಿಸಲಾಗುವುದು (ಸರ್ಕಾರದ ಸುತ್ತೋಲೆ ಸಂಖ್ಯೆ: SWD 155 BCA 2011 ದಿನಾಂಕ: 22.02.2012) |
| iii) | ಪ್ರವರ್ಗ-2ಎ, 2ಬಿ, 3ಎ ಮತ್ತು 3ಬಿ ಮೀಸಲಾತಿಗೆ ಸೇರಿದ ಅಭ್ಯರ್ಥಿಗಳು | **'ನಮೂನೆ-ಎಫ್'**<br>• ಹಿಂದುಳಿದ ವರ್ಗಗಳ ಪ್ರವರ್ಗ-2(ಎ), 2(ಬಿ), 3(ಎ) ಮತ್ತು 3(ಬಿ) ಮೀಸಲಾತಿ ಪ್ರಮಾಣ ಪತ್ರಗಳು (ಐದು) 5 ವರ್ಷ ಚಾಲ್ತಿಯಲ್ಲಿರುತ್ತದೆ. **ಅಭ್ಯರ್ಥಿಗಳು ಪಡೆದಿರುವ ಪ್ರಮಾಣ ಪತ್ರವು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಚಾಲ್ತಿಯಲ್ಲಿರಬೇಕು.**<br>• ಅರ್ಜಿಗಳನ್ನು ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಸಂಬಂಧಿಸಿದ ಮೀಸಲಾತಿ ಪ್ರಮಾಣ ಪತ್ರಗಳನ್ನು ಪಡೆದಿಟ್ಟುಕೊಂಡಿರಬೇಕು.<br>• **ಕೊನೆಯ ದಿನಾಂಕದ ನಂತರ ಪಡೆದ ಪ್ರವರ್ಗ-2(ಎ), 2(ಬಿ), 3(ಎ) ಮತ್ತು 3(ಬಿ) ಮೀಸಲಾತಿ ಪ್ರಮಾಣ ಪತ್ರಗಳನ್ನು ತಿರಸ್ಕರಿಸಲಾಗುವುದು.** |

**ಸಮತಳ ಮೀಸಲಾತಿ:**

| | | |
|---|---|---|
| i) | ಗ್ರಾಮೀಣ ಮೀಸಲಾತಿ | • ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 08 ಸೆನೆನಿ 2001 ದಿನಾಂಕ: 13.02.2001 ರ ಅನ್ವಯ ಗ್ರಾಮೀಣ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು ಪ್ರಸ್ತುತ ಚಾಲ್ತಿಯಲ್ಲಿರುವ ನಿಯಮಗಳ ರೀತ್ಯಾ 1 ರಿಂದ 10ನೇ ತರಗತಿಯವರೆಗೆ ಗ್ರಾಮೀಣ ಮೀಸಲಾತಿಗೆ ಒಳಪಡುವ ಪ್ರದೇಶಗಳಲ್ಲಿ ವ್ಯಾಸಂಗ ಮಾಡಿ ಉತ್ತೀರ್ಣರಾಗಿರುವವರು ಈ ಮೀಸಲಾತಿಯನ್ನು ಪಡೆಯಲು ಅರ್ಹರು.<br>• ಗ್ರಾಮೀಣ ಅಭ್ಯರ್ಥಿಗಳಿಗೆಂದು ಮೀಸಲಿರಿಸಿದ ಹುದ್ದೆಗಳನ್ನು ಕ್ಲೇಮು ಮಾಡುವ ಸಾಮಾನ್ಯ ವರ್ಗದ ಅಭ್ಯರ್ಥಿಗಳು ನಮೂನೆ-2ನ್ನು ಸಂಬಂಧಪಟ್ಟ ಶಾಲಾ ಮುಖ್ಯೋಪಾಧ್ಯಾಯರ ಸಹಿ ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಯವರ ಮೇಲು ರುಜುವಿನೊಂದಿಗೆ ಹಾಗೂ ಈ ಪ್ರಮಾಣ ಪತ್ರವಲ್ಲದೇ ಮೇಲುಸ್ಥರಕ್ಕೆ (Creamy Layer) ಸೇರಿಲ್ಲದಿರುವ ಬಗ್ಗೆ ನಮೂನೆ-1 ರಲ್ಲಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಂಬಂಧಿಸಿದ ತಹಶೀಲ್ದಾರ್ ರವರಿಂದ ಪಡೆದಿಟ್ಟುಕೊಂಡಿರತಕ್ಕದ್ದು. |

| | | |
|---|---|---|
| | | • ಗ್ರಾಮೀಣ ಮೀಸಲಾತಿ ಕೋರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-1, 2(ಎ), 2(ಬಿ), 3(ಎ) ಮತ್ತು 3(ಬಿ) ಮೀಸಲಾತಿಗೆ ಸೇರಿದ ಅಭ್ಯರ್ಥಿಗಳು ಕಡ್ಡಾಯವಾಗಿ ಗ್ರಾಮೀಣ ಮೀಸಲಾತಿ ಪ್ರಮಾಣ ಪತ್ರವನ್ನು ನಮೂನೆ-2ರಲ್ಲಿ ಸಂಬಂಧಪಟ್ಟ ಶಾಲಾ ಮುಖ್ಯೋಪಾಧ್ಯಾಯರ ಸಹಿ, ಮೊಹರು ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಯವರ ಮೇಲು ರುಜು, ಮೊಹರು ಜಾರಿ ಮಾಡಿದ ದಿನಾಂಕದೊಂದಿಗೆ ನಿಗದಿತ ನಮೂನೆಯಲ್ಲಿ ಪಡೆದಿಟ್ಟುಕೊಂಡಿರತಕ್ಕದ್ದು.<br>• ಜಾತಿ ಮೀಸಲಾತಿ ಕೋರಿರುವ ಗ್ರಾಮೀಣ ಅಭ್ಯರ್ಥಿಗಳ ಜಾತಿ ಮೀಸಲಾತಿ ಪ್ರಮಾಣ ಪತ್ರಗಳು ತಿರಸ್ಕೃತಗೊಂಡಲ್ಲಿ, ಅಂತಹ ಅಭ್ಯರ್ಥಿಗಳು ಸಾಮಾನ್ಯ ವರ್ಗದ ಗ್ರಾಮೀಣ ಮೀಸಲಾತಿಗೆ ಸಂಬಂಧಿಸಿದಂತೆ, ನಮೂನೆ-1 (Creamy Layer) ಸಲ್ಲಿಸದಿದ್ದಲ್ಲಿ, ಅಂತಹ ಅಭ್ಯರ್ಥಿಗಳು ಗ್ರಾಮೀಣ ಮೀಸಲಾತಿಗೂ ಸಹ ಅನರ್ಹರಾಗಿರುತ್ತಾರೆ. |
| ii) | ಕನ್ನಡ ಮಾಧ್ಯಮ ಅಭ್ಯರ್ಥಿ ಮೀಸಲಾತಿ | ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ 71 ಸೇನೆನಿ 2001, ದಿನಾಂಕ: 24.10.2002 ರ ಅನ್ವಯ ಕನ್ನಡ ಮಾಧ್ಯಮ ಮೀಸಲಾತಿ ಕೋರುವ ಅಭ್ಯರ್ಥಿಗಳು 1ನೇ ತರಗತಿಯಿಂದ 10ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುವ ಬಗ್ಗೆ ಸಂಬಂಧಪಟ್ಟ ಶಾಲೆಯ ಮುಖ್ಯೋಪಾಧ್ಯಯರ ಸಹಿ, ಮೊಹರು ಮತ್ತು ಜಾರಿ ಮಾಡಿದ ನಿಗದಿತ ನಮೂನೆಯಲ್ಲಿ ಪಡೆದಿಟ್ಟುಕೊಂಡಿರತಕ್ಕದ್ದು. |
| iii) | ಮಾಜಿ ಸೈನಿಕ ಮೀಸಲಾತಿ | ಸೇನೆಯಿಂದ ಬಿಡುಗಡೆ ಹೊಂದಿರುವುದಕ್ಕೆ ಪ್ರಮಾಣ ಪತ್ರ ಹೊಂದಿರಬೇಕು. |
| iv) | ಯೋಜನೆಗಳಿಂದ ನಿರಾಶ್ರಿತ ಅಭ್ಯರ್ಥಿ | ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 23 ಸೇನೆನಿ 99, ದಿನಾಂಕ: 23.11.2000 ರನ್ವಯ ಯೋಜನೆಗಳಿಂದ ನಿರ್ವಸಿತರಾದ (ಆದರೆ ಈ ನಿಯಮಗಳು ಜಾರಿಯಾಗುವ 20 ವರ್ಷಕ್ಕೆ ಮುನ್ನ ನಿರ್ವಸಿತರಾದ ಕುಟುಂಬ ಅಭ್ಯರ್ಥಿಗಳಿಗೆ ಈ ಮೀಸಲಾತಿ ಅನ್ವಯವಾಗುವುದಿಲ್ಲ) ಕುಟುಂಬದ ಅಭ್ಯರ್ಥಿಗಳಿಗೆ ಮೀಸಲಿರಿಸಿದ ಹುದ್ದೆಗಳಿಗೆ ಅರ್ಜಿ ಸಲ್ಲಿಸುವಂತಹ ಅಭ್ಯರ್ಥಿಗಳು ಸಂಬಂಧಿಸಿದ ತಹಶೀಲ್ದಾರ್‌ರವರಿಂದ ನಿಗದಿತ ನಮೂನೆಯಲ್ಲಿ ಪ್ರಮಾಣ ಪತ್ರವನ್ನು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಪಡೆದಿಟ್ಟುಕೊಂಡಿರತಕ್ಕದ್ದು. |
| v) | ಅಂಗವಿಕಲ ಅಭ್ಯರ್ಥಿ ಮೀಸಲಾತಿ | • ಶೇ.40 ಕ್ಕಿಂತ ಕಡಿಮೆ ಇಲ್ಲದಂತಹ ಅಂಗವಿಕಲತೆಯುಳ್ಳ ಅಭ್ಯರ್ಥಿಗಳು ಮಾತ್ರ ಈ ಮೀಸಲಾತಿಯನ್ನು ಕೋರಲು ಅರ್ಹರಾಗಿರುತ್ತಾರೆ. ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ 115 ಸೇನೆನಿ 2005 ದಿನಾಂಕ: 19.11.2005 ರಲ್ಲಿ ನಿಗದಿಪಡಿಸಿರುವ ನಮೂನೆಯಲ್ಲಿ ಅಂಗವಿಕಲತೆ ಬಗ್ಗೆ, ಸರ್ಕಾರದ ಆದೇಶ ಸಂಖ್ಯೆ: ಮಮಇ 65 ಪಿಹೆಚ್‌ಪಿ 2010, ದಿನಾಂಕ: 18.02.2011 ರಂತೆ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿಯ ವೈದ್ಯಕೀಯ ಪ್ರಾಧಿಕಾರ/ತಾಲ್ಲೂಕು ಮಟ್ಟದ ವೈದ್ಯಕೀಯ ಪ್ರಾಧಿಕಾರ/ಜಿಲ್ಲಾ ಮಟ್ಟದ ವೈದ್ಯಕೀಯ ಪ್ರಾಧಿಕಾರ/ಬೆಂಗಳೂರು ವೈದ್ಯಕೀಯ ಪ್ರಾಧಿಕಾರ ಇವರಿಂದ ಪ್ರಮಾಣ ಪತ್ರವನ್ನು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಪಡೆದಿಟ್ಟುಕೊಂಡಿರಬೇಕು.<br>• ನಿಗದಿಪಡಿಸಿದ ನಮೂನೆಗಳನ್ನು ಹೊರತುಪಡಿಸಿ ಇತರೆ ಯಾವುದೇ ನಮೂನೆಯಲ್ಲಿ ಅಂಗವಿಕಲತೆ ಬಗ್ಗೆ ಪಡೆಯಲಾಗಿರುವ ಪ್ರಮಾಣ ಪತ್ರ/ಗುರುತಿನ ಚೀಟಿಯ ಪ್ರತಿಗಳನ್ನು ಪರಿಗಣಿಸಲು ಅವಕಾಶವಿರುವುದಿಲ್ಲ.<br>• **ಅಂಗವಿಕಲ ಅಭ್ಯರ್ಥಿಗಳ ಅಂಗವಿಕಲ ಮೀಸಲಾತಿಯು ನಿಗಮವು ವೈದ್ಯಕೀಯ ಮಂಡಳಿಯಿಂದ ನಡೆಸುವ ವೈದ್ಯಕೀಯ ಪರೀಕ್ಷೆಯ ವರದಿಗೆ ಬದ್ಧವಾಗಿರುತ್ತದೆ.** |

| | | |
|---|---|---|
| vi) | ತೃತೀಯ ಲಿಂಗದ ಅಭ್ಯರ್ಥಿಗಳು | ಭಾರತ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದ ಅಧಿಸೂಚನೆಯನ್ವಯ ಕೇಂದ್ರ ಸರ್ಕಾರವು ಹೊರಡಿಸಿರುವ ತೃತೀಯ ಲಿಂಗ ವ್ಯಕ್ತಿಗಳ (ರಕ್ಷಣಾ ಹಕ್ಕುಗಳು) ನಿಯಮಗಳು, 2020 ರ ಅನ್ವಯ ಸಂಬಂಧಪಟ್ಟ ಪ್ರಮಾಣ ಪತ್ರವನ್ನು ಜಿಲ್ಲಾ ಮ್ಯಾಜಿಸ್ಟ್ರೇಟ್ ರವರಿಂದ ಪಡೆದಿರತಕ್ಕದ್ದು. ಸದರಿ ಪ್ರಮಾಣ ಪತ್ರ ಹೊಂದಿರದಿದ್ದಲ್ಲಿ ಈ ಮೀಸಲಾತಿಗೆ ಪರಿಗಣಿಸಲಾಗುವುದಿಲ್ಲ. |
| vii) | ಅನುಚ್ಛೇದ–371(ಜೆ) ರಂತೆ ಹೈದರಾಬಾದ್–ಕರ್ನಾಟಕ ಪ್ರದೇಶಕ್ಕೆ ಸೇರಿದ ಅಭ್ಯರ್ಥಿಗಳಿಗೆ ಮೀಸಲಾತಿ | ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್–ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) (ಅರ್ಹತಾ ಪ್ರಮಾಣ ಪತ್ರಗಳ ನೀಡಿಕೆ) ಆದೇಶ, 2013 ಕ್ಕೆ ಸಂಬಂಧಿಸಿದಂತೆ, ನೇರ ನೇಮಕಾತಿಯಲ್ಲಿ ಸ್ಥಳೀಯ ವ್ಯಕ್ತಿಯೆಂಬ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು ನಿಗದಿತ ನಮೂನೆಯಲ್ಲಿಯೇ ಅರ್ಹತಾ ಪ್ರಮಾಣ ಪತ್ರವನ್ನು ಸಕ್ಷಮ ಪ್ರಾಧಿಕಾರವಾದ ಸಂಬಂಧಪಟ್ಟ ಉಪ ವಿಭಾಗದ ಸಹಾಯಕ ಆಯುಕ್ತರಿಂದ ಪಡೆದಿಟ್ಟುಕೊಂಡಿರತಕ್ಕದ್ದು. ಮೂಲ ದಾಖಲಾತಿಗಳ ಪರಿಶೀಲನಾ ಸಮಯದಲ್ಲಿ, ಈ ಪ್ರಮಾಣ ಪತ್ರದ ಮೂಲ ಪ್ರತಿಯನ್ನು ಪರಿಶೀಲನೆಗೆ ತಪ್ಪದೇ ಹಾಜರುಪಡಿಸತಕ್ಕದ್ದು. ತಪ್ಪಿದಲ್ಲಿ, ಅಂತಹ ಅಭ್ಯರ್ಥಿಗಳ ಮೀಸಲಾತಿಯನ್ನು ರದ್ದುಪಡಿಸಿ, ಅವರ ಅಭ್ಯರ್ಥಿತನವನ್ನು ಈ ಮೀಸಲಾತಿಯಡಿ ಪರಿಗಣಿಸಲಾಗುವುದಿಲ್ಲ. |
| viii) | ಸೇವಾನಿರತ ಅಭ್ಯರ್ಥಿ | ಯಾರೇ ಅರ್ಜಿದಾರನು ತಾನು ಅರ್ಜಿ ಸಲ್ಲಿಸುವ ಸಮಯದಲ್ಲಿ ಸರ್ಕಾರದ ಯಾವುದೇ ಇತರೆ ಇಲಾಖೆಯಲ್ಲಿ ಅಥವಾ ಯಾವುದೇ ಇತರೆ ರಾಜ್ಯ ಸರ್ಕಾರದ ಅಥವಾ ಕೇಂದ್ರ ಸರ್ಕಾರದ ಅಥವಾ ಈ ಸಂಬಂಧವಾಗಿ ಸರ್ಕಾರವು ನಿರ್ದಿಷ್ಟಪಡಿಸಿದ ಯಾವುದೇ ಇತರೆ ಪ್ರಾಧಿಕಾರದಲ್ಲಿ (ಕವಿಪ್ರನಿನಿ ಮತ್ತು ವಿದ್ಯುತ್ ಸರಬರಾಜು ಕಂಪನಿಗಳನ್ನೊಳಗೊಂಡಂತೆ) ಖಾಯಂ ಅಥವಾ ತಾತ್ಕಾಲಿಕ ನೌಕರಿಯಲ್ಲಿದ್ದರೆ ಮತ್ತು ಆತನು ಯಾರ ಅಧೀನದಲ್ಲಿ ಉದ್ಯೋಗದಲ್ಲಿರುವನೋ ಆ ಇಲಾಖಾ ಮುಖ್ಯಸ್ಥರಿಂದ ಅಥವಾ ಸಂದರ್ಭಾನುಸಾರ ಸರ್ಕಾರದಿಂದ ಅಥವಾ ಪ್ರಾಧಿಕಾರದಿಂದ ಒಪ್ಪಿಗೆ ಪಡೆಯದೆ ಅರ್ಜಿಯನ್ನು ಸಲ್ಲಿಸಿದ್ದರೆ, ಆತನು ನಿಗಮದ ಯಾವುದೇ ಹುದ್ದೆಯ ನೇಮಕಕ್ಕೆ ಅರ್ಹನಾಗಿರತಕ್ಕದ್ದಲ್ಲ. ಸೇವೆಯಲ್ಲಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸುವ ಮುನ್ನ ಅನುಮತಿಯನ್ನು ಅಂದರೆ ನಿರಾಕ್ಷೇಪಣಾ ಪತ್ರವನ್ನು ಕಡ್ಡಾಯವಾಗಿ ಅವರುಗಳ ನೇಮಕಾತಿ ಪ್ರಾಧಿಕಾರಿಗಳ ಸಹಿ, ಮೊಹರು ಮತ್ತು ಜಾರಿ ಮಾಡಿದ ದಿನಾಂಕದೊಂದಿಗೆ ಪಡೆದಿಟ್ಟುಕೊಂಡಿರತಕ್ಕದ್ದು. |

**<u>ಸೂಚನೆ:</u>**

i) ಈ ಮೇಲಿನ ಮೀಸಲಾತಿಗಳಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ನಿಗದಿಪಡಿಸಿರುವ ನಮೂನೆಗಳನ್ನು ವೆಬ್‌ಸೈಟ್‌ನಲ್ಲಿ ಉದ್ಯೋಗ ಪ್ರಕಟಣೆಯೊಂದಿಗೆ ಅಪ್–ಲೋಡ್ ಮಾಡಲಾಗಿದೆ.

ii) **ಈಗಾಗಲೇ ಸರ್ಕಾರಿ ಸೇವೆಯಲ್ಲಿರುವ ಅಭ್ಯರ್ಥಿಗಳು, ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದೊಳಗೆ ತಮ್ಮ ಉದ್ಯೋಗದಾತರಿಂದ 'ನಿರಾಕ್ಷೇಪಣಾ ಪತ್ರವನ್ನು' ಪಡೆದಿಟ್ಟುಕೊಳ್ಳತಕ್ಕದ್ದು. ದಾಖಲಾತಿ ಪರಿಶೀಲನಾ ಸಮಯದಲ್ಲಿ ಸದರಿ 'ನಿರಾಕ್ಷೇಪಣಾ ಪತ್ರ' ದ ಮೂಲ ಪ್ರತಿಯನ್ನು ಸಲ್ಲಿಸತಕ್ಕದ್ದು.**

iii) **ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದ ನಂತರ ಪಡೆದ ಎಲ್ಲಾ ಮೀಸಲಾತಿ ಪ್ರಮಾಣ ಪತ್ರಗಳನ್ನು ತಿರಸ್ಕರಿಸಲಾಗುವುದು.**

iv) ಮೂಲ ದಾಖಲಾತಿ ಪರಿಶೀಲನಾ ಸಮಯದಲ್ಲಿ, ಆನ್–ಲೈನ್ ಅರ್ಜಿಯೊಂದಿಗೆ ಕೋರಿರುವ ಎಲ್ಲಾ ಮೀಸಲಾತಿಗಳಿಗೆ ಸಂಬಂಧಿಸಿದಂತೆ ಎಲ್ಲಾ ದಾಖಲಾತಿ/ಪ್ರಮಾಣ ಪತ್ರಗಳ ಮೂಲ ಪ್ರತಿಗಳನ್ನು ಪರಿಶೀಲನೆಗೆ ತಪ್ಪದೇ ಹಾಜರುಪಡಿಸತಕ್ಕದ್ದು. ತಪ್ಪಿದ್ದಲ್ಲಿ, ಅಂತಹ ಅಭ್ಯರ್ಥಿಗಳ ಮೀಸಲಾತಿಯನ್ನು ರದ್ದುಪಡಿಸಿ, **ಅವರ ಅಭ್ಯರ್ಥಿತನವನ್ನು ಸಾಮಾನ್ಯ ಪ್ರವರ್ಗದಡಿಯಲ್ಲಿ ಅರ್ಹರಾದಲ್ಲಿ ಮಾತ್ರ ಪರಿಗಣಿಸಲಾಗುವುದು. ನಿಗದಿಪಡಿಸಿದ ನಮೂನೆಗಳನ್ನು ಹೊರತುಪಡಿಸಿ, ಇತರೆ ಯಾವುದೇ ನಮೂನೆಗಳಲ್ಲಿ ಪಡೆಯಲಾದ ಮೀಸಲಾತಿ ಪ್ರಮಾಣ ಪತ್ರಗಳನ್ನು ತಿರಸ್ಕರಿಸಲಾಗುವುದು.**

**15. ಸಾಮಾನ್ಯ ಸೂಚನೆಗಳು:**

i) ಭಾರತೀಯ ನಾಗರೀಕರು ಮಾತ್ರ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.

ii) ಅಭ್ಯರ್ಥಿಯು ಅಪರಾಧಿಯೆಂದು ಘೋಷಿಸಲ್ಪಟ್ಟರೆ ಅಥವಾ ಕೇಂದ್ರ ಲೋಕಸೇವಾ/ರಾಜ್ಯ ಲೋಕಸೇವಾ ಆಯೋಗದಿಂದ ಯಾವುದೇ ಪರೀಕ್ಷೆಯನ್ನು ಬರೆಯಲು ಅಥವಾ ಯಾವುದೇ ಹುದ್ದೆಗೆ ಆಯ್ಕೆಯಾಗಲು ತಾತ್ಕಾಲಿಕವಾಗಿ/ಖಾಯಂ ಆಗಿ ತಡೆಹಿಡಿಯಲ್ಪಟ್ಟಿದ್ದರೆ ಅಂತಹವರನ್ನು ನೇಮಕಾತಿಗೆ ಪರಿಗಣಿಸಲಾಗುವುದಿಲ್ಲ. ಆದಾಗ್ಯೂ, ನಿಗಮವು ಅಂತಹ ಪ್ರಕರಣವನ್ನು ಕೂಲಂಕುಷವಾಗಿ ಪರಿಶೀಲಿಸಿದ ನಂತರ, ಅಂತಹ ಅಭ್ಯರ್ಥಿಯು ಅರ್ಹನೆಂದು ತೀರ್ಮಾನಿಸಿದಲ್ಲಿ ಮಾತ್ರ ನೇಮಕಾತಿಗೆ ಪರಿಗಣಿಸಲಾಗುವುದು.

iii) ಅಭ್ಯರ್ಥಿಗಳನ್ನು ಕವಿಪ್ರನಿನಿ ವತಿಯಿಂದ ನೇಮಕಾತಿ ಮಾಡಲಾಗುವುದು ಹಾಗೂ ಆಯ್ಕೆ ಹೊಂದಿದ ಅಭ್ಯರ್ಥಿಗಳನ್ನು ಕವಿಪ್ರನಿನಿ ಅಥವಾ ಎಸ್ಕಾಂಗಳ ವ್ಯಾಪ್ತಿಯಲ್ಲಿ ತೈನಾತಿಸಲಾಗುವುದು.

iv) ತಪ್ಪು ಮಾಹಿತಿಯೊಂದಿಗೆ ಸಲ್ಲಿಸಲಾಗುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಅರ್ಜಿಯಲ್ಲಿ ತಪ್ಪು ಮಾಹಿತಿ ನೀಡಿ ನೇಮಕಾತಿಯನ್ನು ಪಡೆಯುವ ಅಭ್ಯರ್ಥಿಗಳನ್ನು ವಜಾಗೊಳಿಸಲಾಗುವುದು ಹಾಗೂ ಕಾನೂನಿನ ಪ್ರಕಾರ ಕ್ರಿಮಿನಲ್ ಮೊಕದ್ದಮೆಯನ್ನು ಹೂಡಲಾಗುವುದು.

v) ಎಲ್ಲಾ ಪತ್ರ ವ್ಯವಹಾರಗಳನ್ನು (ಪೋಸ್ಟ್ ಅಥವಾ ಇ-ಮೇಲ್ ಅಥವಾ ಎಸ್.ಎಂ.ಎಸ್.) ಅರ್ಜಿಯಲ್ಲಿ ಸಲ್ಲಿಸಿರುವ ವಿವರಗಳನ್ವಯ ಮಾಡಲಾಗುತ್ತದೆ. ನಂತರದ ದಿನಗಳಲ್ಲಿ ವಿಳಾಸ, ಇ-ಮೇಲ್ ಮತ್ತು ಮೊಬೈಲ್ ಸಂಖ್ಯೆ ಬದಲಾವಣೆಗೆ ಸಲ್ಲಿಸಲಾಗುವ ಕೋರಿಕೆಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ.

vi) ಆನ್-ಲೈನ್‌ನಲ್ಲಿ ಅರ್ಜಿ ಭರ್ತಿ ಮಾಡಿ ಸಲ್ಲಿಸಿದ ಮಾತ್ರಕ್ಕೆ ಅಭ್ಯರ್ಥಿಗಳು ಉದ್ಯೋಗ ಪ್ರಕಟಣೆಯಲ್ಲಿನ ಎಲ್ಲಾ ಷರತ್ತುಗಳನ್ನು ಪೂರೈಸಿರುತ್ತಾರೆ ಎಂದು ಅರ್ಥವಲ್ಲ. ಅರ್ಜಿಗಳನ್ನು ತದನಂತರದಲ್ಲಿ ಪರಿಶೀಲನೆಗೆ ಒಳಪಡಿಸಲಾಗುವುದು ಹಾಗೂ ಯಾವುದೇ ಹಂತದಲ್ಲಾಗಲೀ ನ್ಯೂನ್ಯತೆಗಳು ಕಂಡುಬಂದಲ್ಲಿ ಅಂತಹ ಅಭ್ಯರ್ಥಿಗಳ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

vii) ಆಯ್ಕೆಗಾಗಿ ಯಾವುದೇ ರೀತಿಯ ಪ್ರಭಾವ ತಂದಲ್ಲಿ, ಅಂತಹ ಅಭ್ಯರ್ಥಿಗಳನ್ನು ನೇಮಕಾತಿಯಿಂದ ಅನರ್ಹಗೊಳಿಸಲಾಗುವುದು.

viii) ಅಭ್ಯರ್ಥಿಗಳು ಆನ್-ಲೈನ್ ಮೂಲಕ ಅರ್ಜಿ ಸಲ್ಲಿಸುವಾಗ ನಿಗಮದ ವ್ಯವಹಾರಗಳಿಗೆ ಅಧಿಕೃತ ಇ-ಮೇಲ್ ಮತ್ತು ಮೊಬೈಲ್ ಸಂಖ್ಯೆಗಳನ್ನು ಮಾತ್ರ ಒದಗಿಸಬೇಕು.

ix) ಅಭ್ಯರ್ಥಿಗಳು ಮೂಲ ದಾಖಲಾತಿಗಳು/ಪ್ರಮಾಣ ಪತ್ರಗಳ ಮೂಲ ದಾಖಲಾತಿಗಳನ್ನು ಸಲ್ಲಿಸಲು ಕರೆ ನೀಡಿದಾಗ, ಮೂಲ ದಾಖಲೆ/ಪ್ರಮಾಣ ಪತ್ರಗಳನ್ನು ಪರಿಶೀಲನೆಗಾಗಿ ಅವುಗಳ ದೃಢೀಕೃತ ಪ್ರತಿಗಳೊಂದಿಗೆ ಹಾಜರುಪಡಿಸತಕ್ಕದ್ದು. ದಾಖಲಾತಿ ಪರಿಶೀಲನಾ ಸಂದರ್ಭದಲ್ಲಿ ಸಂಬಂಧಪಟ್ಟ ದಾಖಲಾತಿಗಳನ್ನು ಹಾಜರುಪಡಿಸಲು ವಿಫಲರಾಗುವ ಅಭ್ಯರ್ಥಿಗಳನ್ನು ನೇಮಕಾತಿಗೆ ಪರಿಗಣಿಸಲಾಗುವುದಿಲ್ಲ.

x) ಈ ನೇಮಕಾತಿ ಪ್ರಕ್ರಿಯೆಯನ್ನು ಯಾವುದೇ ಹಂತದಲ್ಲಾದರೂ ತಡೆಹಿಡಿಯುವ ಅಥವಾ ರದ್ದುಗೊಳಿಸುವ ಹಕ್ಕನ್ನು ಕವಿಪ್ರನಿನಿಯು ಹೊಂದಿರುತ್ತದೆ.

xi) ಒಮ್ಮೆ ಪಾವತಿಸಲಾದ ಅರ್ಜಿ ಶುಲ್ಕವನ್ನು ಯಾವುದೇ ಸಂದರ್ಭದಲ್ಲಿಯೂ ಹಿಂದಿರುಗಿಸಲಾಗುವುದಿಲ್ಲ ಅಥವಾ ನಿಗಮವು ನಡೆಸುವ ಇತರೆ ನೇಮಕಾತಿಗಳಿಗೆ ಹೊಂದಾಣಿಕೆ ಮಾಡಿಕೊಳ್ಳಲಾಗುವುದಿಲ್ಲ.

xii) ನೇಮಕಾತಿಯ ಪ್ರತಿಯೊಂದು ಹಂತಗಳ ಬಗ್ಗೆ ಕವಿಪ್ರನಿನಿಯ ಅಂತರ್ಜಾಲ https://kptcl.karnataka.gov.in ದಲ್ಲಿ ಪ್ರಕಟಿಸಲಾಗುವುದರಿಂದ, ನಿಗಮವು ಅಭ್ಯರ್ಥಿಗಳೊಂದಿಗೆ ಯಾವುದೇ ಪತ್ರ ವ್ಯವಹಾರ ನಡೆಸುವುದಿಲ್ಲ. ಆದುದರಿಂದ ಅಭ್ಯರ್ಥಿಗಳು ನಿಗಮದ ಅಂತರ್ಜಾಲವನ್ನು ಕಾಲಕಾಲಕ್ಕೆ ವೀಕ್ಷಿಸಲು ಈ ಮೂಲಕ ಸೂಚಿಸಿದೆ.

xiii) ಅಭ್ಯರ್ಥಿಗಳು ಆನ್-ಲೈನ್ ಅರ್ಜಿಯಲ್ಲಿ ವರ್ಗ/ಮೀಸಲಾತಿ/ವಿದ್ಯಾರ್ಹತೆ ಇತ್ಯಾದಿ ಕುರಿತಂತೆ ಭರ್ತಿ ಮಾಡಿರುವ ವಿವರಗಳು ಅಂತಿಮವಾಗಿರುತ್ತದೆ. ಯಾವುದೇ ಸಂದರ್ಭದಲ್ಲೂ ವಿವರಗಳ ಬದಲಾವಣೆಗೆ ಅವಕಾಶವಿರುವುದಿಲ್ಲ. ಆದ್ದರಿಂದ ಆನ್-ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸುವ ಸಂದರ್ಭದಲ್ಲಿ ವಿವರಗಳ ಬಗ್ಗೆ ಸರಿಯಾಗಿ ಖಚಿತಪಡಿಸಿಕೊಳ್ಳುವುದು.

xiv) ಆನ್‌–ಲೈನ್ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕವು ಸಮೀಪಿಸುತ್ತಿರುವಂತೆ, ಅರ್ಜಿ ಸಲ್ಲಿಸಲು ಹೆಚ್ಚಿನ ಅಭ್ಯರ್ಥಿಗಳು ಪ್ರಯತ್ನಿಸುವುದರಿಂದ, ಅಂತರ್ಜಾಲದ ವೇಗವು ಕುಂಠಿತಗೊಂಡು, ಅರ್ಜಿ ಸಲ್ಲಿಸಲು ವಿಳಂಬವಾಗುವ ಸಾಧ್ಯತೆ ಅಥವಾ ಅರ್ಜಿ ಸಲ್ಲಿಸುವಲ್ಲಿ ವಿಫಲತೆ ಉಂಟಾಗುವ ಸಂಭವವಿರುತ್ತದೆ. ಆದುದರಿಂದ ಅಭ್ಯರ್ಥಿಗಳು ಕೊನೆಯ ದಿನಾಂಕದವರೆಗೆ ಕಾಯದೆ ಮುಂಚಿತವಾಗಿಯೇ ಅರ್ಜಿ ಸಲ್ಲಿಸುವುದು ಸೂಕ್ತವಾಗಿರುತ್ತದೆ. ನಿಗದಿತ ಕಾಲಾವಧಿಯೊಳಗೆ ಅಭ್ಯರ್ಥಿಗಳು ಅರ್ಜಿ ಸಲ್ಲಿಸದೇ ಇರುವುದಕ್ಕೆ ಕವಿಪ್ರನಿನಿಯು ಯಾವುದೇ ಕಾರಣದಿಂದಲೂ ಜವಾಬ್ದಾರಿಯಾಗಿರುವುದಿಲ್ಲ.

xv) 'ಆನ್‌–ಲೈನ್' ಮೂಲಕ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ತಾಂತ್ರಿಕ ತೊಂದರೆ ಅಥವಾ ಸಮಸ್ಯೆ ಉಂಟಾದಲ್ಲಿ ಮತ್ತು ಇತರೆ ಸ್ಪಷ್ಟೀಕರಣಕ್ಕಾಗಿ ಸಹಾಯವಾಣಿ ಸಂಖ್ಯೆ: 080–22211527, EXT: 3789, 3872 ನ್ನು ಮಾತ್ರ ಬೆಳಿಗ್ಗೆ 10:30 ರಿಂದ ಸಂಜೆ 5:00 ಗಂಟೆಯವರೆಗೆ ಸಂಪರ್ಕಿಸಿ ಅಗತ್ಯ ಮಾಹಿತಿ ಪಡೆಯುವುದು.

xvi) ಅರ್ಜಿಯನ್ನು ಅಂಚೆ, ಕೊರಿಯರ್ ಅಥವಾ ಇತರೆ ಯಾವುದೇ ವಿಧಾನದಲ್ಲಿ ಸ್ವೀಕರಿಸಲಾಗುವುದಿಲ್ಲ.

xvii) ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಆಡಳಿತ ಕಚೇರಿಯು ಬೆಂಗಳೂರಿನಲ್ಲಿ ಇರುವುದರಿದ, ಈ ನೇಮಕಾತಿಗೆ ಸಂಬಂಧಿಸಿದಂತೆ ಯಾವುದೇ ಕಾನೂನಾತ್ಮಕ ವಿವಾದ/ವಿಚಾರಣೆಗಳನ್ನು ಬೆಂಗಳೂರು ನಗರದಲ್ಲಿರುವ ನ್ಯಾಯಾಲಯಗಳ ವ್ಯಾಪ್ತಿಗೆ ಮಾತ್ರ ಒಳಪಟ್ಟಿರುತ್ತದೆ.

ನಿರ್ದೇಶಕರು
(ಆಡಳಿತ ಮತ್ತು ಮಾನವ ಸಂಪನ್ಮೂಲ)
ಕವಿಪ್ರನಿನಿ